ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

01 ಆಗಸ್ಟ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 141 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆದ ಫಿಟ್‌ನೆಸ್ ಪರೀಕ್ಷೆಯಲ್ಲಿ ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ತೇರ್ಗಡೆಯಾಗುವ ಮೂಲಕ ಶ್ರೀಲಂಕಾ ವಿರುದ್ಧ ನಡೆಯಲಿರುವ ಟೆಸ್ಟ್ ಸರಣಿಗೆ ಆಯ್ಕೆಯಾಗಿದ್ದಾರೆ.



ಚೇತರಿಸಿದ ಉತ್ಪಾದನೆ, ಐಟಿ : ಎಐ ಆತಂಕ ದೂರ » 2


ನಾಳೆ ಕಾನ್‌ಸ್ಟೇಬಲ್ ನೇಮಕಾತಿಗೆ ಪರೀಕ್ಷೆ » 3


ತಜ್ಞರು ವಿಪಕ್ಷಗಳ ಸಲಹೆ ಬಳಿಕ ತೀರ್ಮಾನ : ಸಿ.ಎಂ. » 4


# ಕಾವೇರಿ ನೀರು ಹಂಚಿಕೆ : ವಾಸ್ತವ ಪರಿಶೀಲಿಸಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸದಸ್ಯರು ದೆಹಲಿಯ ಎ.ಸಿ. ಕೊಠಡಿಗಳಲ್ಲಿ ಕುಳಿತು ತೀರ್ಮಾನ ಕೈಗೊಳ್ಳುವ ಬದಲು, ಕರ್ನಾಟಕದ ಕೆಆರ್‌ಎಸ್, ಕಬಿನಿ, ಹಾರಂಗಿ, ಹೇಮಾವತಿ ಹಾಗು ತಮಿಳುನಾಡಿನ ಮೆಟ್ಟೂರು ಜಲಾಶಯಗಳಿಗೆ ಭೇಟಿ ನೀಡಿ ಎರಡೂ ರಾಜ್ಯಗಳ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಿ ನಂತರ ತೀರ್ಮಾನ ಕೈಗೊಳ್ಳಬೇಕೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಆಗ್ರಹಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ತೀವ್ರ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿರುವ ಸಂದರ್ಭದಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯೂಎಂಎ) ತಮಿಳುನಾಡಿಗೆ ಪ್ರತಿದಿನ 3,500 ಕ್ಯೂಸೆಕ್ ನೀರನ್ನು 15 ದಿನಗಳ ಕಾಲ ಬಿಡುಗಡೆ ಮಾಡುವಂತೆ ನೀಡಿರುವ ಆದೇಶ ಅವೈಜ್ಞಾನಿಕವಾಗಿದೆ ಎಂದು ಟೀಕಿಸಿದರು.

## ಆದೇಶ ಅವೈಜ್ಞಾನಿಕ : ಹೆಚ್.ಡಿ.ಕುಮಾರಸ್ವಾಮಿ



ಕಾವೇರಿ ನೀರಿನ ಹಂಚಿಕೆ ವಿಚಾರದಲ್ಲಿ ಊಹಾಪೋಹಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳದೆ, ಎರಡೂ ರಾಜ್ಯಗಳ ಜಲಾಶಯಗಳ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ ನಿರ್ಧಾರ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ 12 ಟಿಎಂಸಿ ನೀರು ಹರಿದು ಬರುತ್ತದೆ ಎಂಬ ಊಹೆಯ ಮೇಲೆ ತಮಿಳುನಾಡಿಗೆ ನೀರು ಬಿಡುವಂತೆ ಸಿಡಬ್ಲ್ಯೂಆರ್‌ಸಿ ಆದೇಶಿಸಿರುವುದು ಸಮಂಜಸವಲ್ಲ. ಈ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ರಾಜ್ಯದ ನೈಜ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಲ್ಲಿ ಸದ್ಯ 55 ಟಿಎಂಸಿ ನೀರು ಮಾತ್ರ ಲಭ್ಯವಿದೆ. ಅದರಲ್ಲಿ 10 ಟಿಎಂಸಿ ಡೆಡ್ ಸ್ಟೋರೇಜ್ ಆಗಿದ್ದು, ಸುಮಾರು 30 ಟಿಎಂಸಿ ನೀರು ಮುಂದಿನ ಏಳು ತಿಂಗಳುಗಳ ಕಾಲ ಬೆಂಗಳೂರು ನಗರದ ಕುಡಿಯುವ ನೀರಿಗೆ ಅಗತ್ಯವಿದೆ. ಪರಿಸರ ಸಂರಕ್ಷಣೆಗೆ ಇನ್ನೂ 10 ಟಿಎಂಸಿ ನೀರು ಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮುಂದಿನ ದಿನಗಳಲ್ಲಿ 12 ಟಿಎಂಸಿ ನೀರು ಬರುತ್ತದೆ ಎಂಬ ಊಹೆಯ ಆಧಾರದ ಮೇಲೆ ನೀರು ಬಿಡುವಂತೆ ಆದೇಶಿಸಿರುವುದು ಸರಿಯಲ್ಲವೆಂದು ಹೇಳಿದರು.

ಕರ್ನಾಟಕ ಸರ್ಕಾರ ರೈತರು ಕೃಷಿಗಾಗಿ ನದಿಯ ನೀರನ್ನು ಅವಲಂಬಿಸಬಾರದೆಂದು ಹೇಳಿರುವ ಸಂದರ್ಭದಲ್ಲಿ, ತಮಿಳುನಾಡು ಕೃಷಿ ಉದ್ದೇಶಕ್ಕಾಗಿ ನೀರು ಬಿಡುವಂತೆ ಒತ್ತಾಯಿಸುವುದರಲ್ಲಿ ಅರ್ಥವಿಲ್ಲ. ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಬೇಕು. ತಮಿಳುನಾಡು ಕುಡಿಯುವ ನೀರಿನ ಅಗತ್ಯವನ್ನು ಮುಂದಿಟ್ಟರೆ ಚರ್ಚೆ ನಡೆಸಬಹುದು. ಆದರೆ, ಕೃಷಿಗಾಗಿ ನೀರು ಕೇಳಿದರೆ ನೀಡಲು ಸಾಧ್ಯವಿಲ್ಲವೆಂದು ರಾಜ್ಯ ಸರ್ಕಾರ ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯಿಸಿದರು.

» ನಾಲ್ಕನೇ ಪುಟದಲ್ಲಿ

### ಸರ್ವಪಕ್ಷ ಸಭೆಯಲ್ಲಿ ಭಾಗವಹಿಸುವೆ

ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು. ಭಾನುವಾರ ನಡೆಯಲಿರುವ ಸರ್ವಪಕ್ಷ ಸಭೆಯಲ್ಲಿ ಜೆಡಿಎಸ್ ಪಕ್ಷದ ಪರವಾಗಿ ಭಾಗವಹಿಸುವುದಾಗಿ ತಿಳಿಸಿದ ಹೆಚ್.ಡಿ.ಕುಮಾರಸ್ವಾಮಿ ಅವರು, ರಾಜಕೀಯಕ್ಕಿಂತ ರಾಜ್ಯದ ಜನರು ಹಾಗು ರೈತರ ಹಿತಾಸಕ್ತಿಯನ್ನು ಮುಂದಿಟ್ಟುಕೊಂಡು ಸಭೆಯಲ್ಲಿ ತಮ್ಮ ಅಭಿಪ್ರಾಯ ಮಂಡಿಸುವುದಾಗಿ ಹೇಳಿದರು. ಜೊತೆಗೆ, ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕದ ಹಿತಾಸಕ್ತಿಯನ್ನು ಕಡೆಗಣಿಸಬಾರದೆಂದು ಒತ್ತಾಯಿಸಿದರು.

### ಹೈಕಮಾಂಡ್ ನಾಯಕರ ಮನೆ ಬಾಗಿಲು ಕಾಯಬೇಡಿ

ಮಂತ್ರಿಮಂಡಲ ವಿಸ್ತರಣೆಗಾಗಿ ಹಲವು ದಿನ ದೆಹಲಿಯಲ್ಲಿ ಹೈಕಮಾಂಡ್ ನಾಯಕರ ಮನೆ ಬಾಗಿಲು ಕಾಯುವುದನ್ನು ಬಿಟ್ಟು ರಾಜ್ಯದಲ್ಲಿ ಎದುರಾಗಿರುವ ಬರಗಾಲದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವತ್ತ ಸರ್ಕಾರ ಗಮನ ಹರಿಸಬೇಕು. ರೈತರಿಗೆ ಸರ್ಕಾರ ಇದುವರೆಗೆ ಯಾವ ವಿಶೇಷ ಘೋಷಣೆ ಮಾಡಿದೆ ಎಂಬ ಪ್ರಶ್ನಿಸಿದ ಅವರು, ಜನರು ಗುಳೆ ಹೋಗುತ್ತಿರುವುದರಿಂದ ಅವರ ಮಕ್ಕಳ ಶಿಕ್ಷಣಕ್ಕೂ ಧಕ್ಕೆಯಾಗುತ್ತಿದೆ. ಮುಖ್ಯಮಂತ್ರಿ ಹಾಗು ಸರ್ಕಾರ ರೈತರ ಬದುಕಿನ ಬಗ್ಗೆ ಸ್ವಲ್ಪವಾದರೂ ಯೋಚನೆ ಮಾಡಬೇಕು. ಮೊದಲು ರಾಜ್ಯದ ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡಿ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕೆಂದು ಕುಮಾರಸ್ವಾಮಿ ಒತ್ತಾಯಿಸಿದರು.

# ಕಾಡಾನೆ ದಾಳಿಗೆ ರೈತ ಬಲಿ



• ಪ್ರಜೋದಯ ವರದಿ

**ಬೇಲೂರು :** ಕಾಡಾನೆ ದಾಳಿಗೆ ರೈತರೊಬ್ಬರು ಬಲಿಯಾಗಿರುವ ಘಟನೆ ತಾಲ್ಲೂಕಿನ ಅರೇಹಳ್ಳಿ ಹೋಬಳಿ ಹಿರೇಹಸಡೆ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಕಣಗುಪ್ಪೆ ಗ್ರಾಮದ ಧರ್ಮರಾಜು (50) ಸಾವನ್ನಪ್ಪಿದ್ದಾರೆ. ಜು.22ರ ಬುಧವಾರ ಪಟ್ಟಣಕ್ಕೆ ತೆರಳಿದ್ದ ಅವರು ವಾಪಾಸ್ ಬಂದಿರಲಿಲ್ಲ. ಅರೇಹಳ್ಳಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಲಾಗಿತ್ತು. ಧರ್ಮರಾಜು ಅವರಿಗಾಗಿ ಕುಟುಂಬಸ್ಥರು, ಗ್ರಾಮಸ್ಥರು ನಿರಂತರ ಹುಡುಕಾಟ ನಡೆಸುತ್ತಿದ್ದರು. ಬುಧವಾರ ರಾತ್ರಿ ಚಿಕ್ಕಹಸಡೆ ಸಮೀಪ ಧರ್ಮರಾಜು ಅವರು ನಡೆದುಕೊಂಡು ಹೋಗುತ್ತಿದ್ದದನ್ನು ಸ್ಥಳೀಯ ಯುವಕನೊಬ್ಬ ಗಮನಿಸಿದ್ದ ಎನ್ನಲಾಗಿದೆ. ಈ ಮಾಹಿತಿಯ ಆಧಾರದ ಮೇಲೆ ಚಿಕ್ಕಹಸಡೆ ಹಾಗು ಹಿರೇಹಸಡೆ ಗ್ರಾಮಗಳ ನಡುವಿನ ಕಾಫಿ ತೋಟಗಳಲ್ಲಿ ಕುಟುಂಬಸ್ಥರು ಹುಡುಕಾಟ ತೀವ್ರಗೊಳಿಸಿದ್ದರು.

ಶುಕ್ರವಾರ ಸಂಜೆ 4.30ರ ವೇಳೆಗೆ ಹಿರೇಹಸಡೆ ಗ್ರಾಮದ ಸುದರ್ಶನ್ ಎಂಬುವವರಿಗೆ ಸೇರಿದ ಕಾಫಿ ತೋಟದಲ್ಲಿ ಧರ್ಮರಾಜು ಅವರ ಶವ ಪತ್ತೆಯಾಗಿದೆ. ಕಾಡಾನೆ ದಾಳಿಯಿಂದ ಗಂಭೀರವಾಗಿ ಗಾಯಗೊಂಡ ಅವರು ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಘಟನೆಯಿಂದ ಸುತ್ತಲಿನ ಗ್ರಾಮಗಳಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.

» ನಾಲ್ಕನೇ ಪುಟದಲ್ಲಿ

# ನ್ಯಾಯಯುತ ಪರಿಹಾರಕ್ಕೆ ಎತ್ತಿನಹೊಳೆ ಸಂತ್ರಸ್ತರ ಆಗ್ರಹ

## ಎಕರೆಗೆ ಕೇವಲ 2.50 ಲ.ರೂ. ಅಲ್ಪ ಪರಿಹಾರಕ್ಕೆ ಆಕ್ರೋಶ | ರೈತರ ಪ್ರತಿಭಟನೆ

• ಪ್ರಜೋದಯ ವರದಿ

**ಬೇಲೂರು :** ಎತ್ತಿನಹೊಳೆ ಯೋಜನೆ ಕಾಮಗಾರಿಗಾಗಿ ಭೂಮಿ ನೀಡಿದ ರೈತರಿಗೆ ನ್ಯಾಯಯುತ ಪರಿಹಾರ ನೀಡದೆ ಸರ್ಕಾರ ಹಾಗು ಅಧಿಕಾರಿಗಳು ವಂಚಿಸುತ್ತಿದ್ದಾರೆಂದು ಆರೋಪಿಸಿ ಐದಳ್ಳಕಾವಲ್ ವ್ಯಾಪ್ತಿಯ ಗಂಗೂರು ಗ್ರಾಮದ ರೈತರು ಪ್ರತಿಭಟನೆ ನಡೆಸಿದರು.

ಗ್ರಾಮದ ಮುಖಂಡ ಸಿದ್ದೇಶ ಅವರು ಮಾತನಾಡಿ, ಸುಮಾರು 8-9 ವರ್ಷಗಳ ಹಿಂದೆ ಯೋಜನೆಗಾಗಿ ಗುತ್ತಿಗೆದಾರರು ರೈತರೊಂದಿಗೆ ತ್ರಿಪಕ್ಷೀಯ ಒಪ್ಪಂದ ಮಾಡಿಕೊಂಡು ಎಕರೆಗೆ 50 ಸಾವಿರ ಮುಂಗಡ ನೀಡಿ ಭೂಮಿ ಪಡೆದುಕೊಂಡಿದ್ದರು. ಒಂದೂವರೆ ವರ್ಷದೊಳಗೆ ಸಂಪೂರ್ಣ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ, ಅರಣ್ಯ ಹಾಗು ಕಂದಾಯ ಇಲಾಖೆಯ ನೆಪವೊಡ್ಡಿ ವರ್ಷಗಳಿಂದ ಪರಿಹಾರ ವಿತರಣೆಯನ್ನು ವಿಳಂಬಗೊಳಿಸಲಾಗಿದೆ ಎಂದು ಆರೋಪಿಸಿದರು.

ರೈತರ ನಿರಂತರ ಹೋರಾಟದ ಬಳಿಕ ದ್ವಿಪರಿಹಾರ ಅಡಿಯಲ್ಲಿ ಐದಳ ಕಾವಲ್ ವ್ಯಾಪ್ತಿಯ ಸುಮಾರು 150 ಎಕರೆ ಭೂಮಿಗೆ 28.50 ಕೋ.ರೂ. ಪರಿಹಾರ ಮಂಜೂರು ಮಾಡಿ ಸಚಿವ ಸಂಪುಟ ಅನುಮೋದನೆ ನೀಡಿತ್ತು. ಜು.30ರೊಳಗೆ ಪರಿಹಾರ ವಿತರಿಸುವುದಾಗಿ ಸಹಾಯಕ ಆಯುಕ್ತರು ಭರವಸೆ ನೀಡಿದ್ದರು. ಇದೀಗ ಎಕರೆಗೆ ಕೇವಲ 2.50 ಲ. ರೂ. ನೀಡುವುದಾಗಿ ಅಧಿಕಾರಿಗಳು ತಿಳಿಸಿರುವುದು ರೈತರಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಹೇಳಿದರು.

ರೈತರು ವಿರೋಧ ವ್ಯಕ್ತಪಡಿಸಿದ ಬೆನ್ನಲ್ಲೇ ಅಧಿಕಾರಿಗಳು ರಾತ್ರಿ ವೇಳೆ ಮನೆಗಳ ಬಾಗಿಲಿಗೆ ನೋಟೀಸ್ ಅಂಟಿಸಿ ಒತ್ತಡ ಹೇರುತ್ತಿದ್ದಾರೆ. ಭೂ ದಾಖಲೆ ಮತ್ತು ಪಹಣಿ ಹೊಂದಿರುವ ರೈತರು ಹಾಗು ದಶಕಗಳಿಂದ ಭೂಮಿಯನ್ನು ಅನುಭವಿಸುತ್ತಿರುವ ರೈತರಿಗೆ ಒಂದೇ ರೀತಿಯ ಅಲ್ಪ ಪರಿಹಾರ ನಿಗದಿಪಡಿಸಿರುವುದು ಅನ್ಯಾಯವೆಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಮಹಿಳೆಯರಾದ ಭಾಗ್ಯಮ್ಮ, ಪುಟ್ಟಮ್ಮ, ಸಿಂಧು ಮಾತನಾಡಿ, ನಮ್ಮ ಜೀವನಾಧಾರವೇ ಈ ಜಮೀನು. ಅಧಿಕಾರಿಗಳು ರಾತ್ರಿ ವೇಳೆ ಬಂದು ಬೆದರಿಕೆ ಹಾಕುತ್ತಿದ್ದಾರೆ. ನ್ಯಾಯಯುತ ಪರಿಹಾರ ಸಿಗದಿದ್ದರೆ ಜಮೀನು ಬಿಡುವುದಿಲ್ಲ. ಕಾಮಗಾರಿ ನಡೆಸಲು ಬಂದರೆ ಜೆಸಿಬಿ ಮುಂದೆ ಮಲಗಿ ಪ್ರತಿಭಟನೆ ನಡೆಸುತ್ತೇವೆಂದು ಎಚ್ಚರಿಕೆ ನೀಡಿದರು.

ರೈತ ಸಂಘದ ಮುಖಂಡ ಶಿವಪ್ಪ ಅವರು ಮಾತನಾಡಿ, ರಾಜ್ಯದ ಇತರೆ ಭಾಗಗಳಲ್ಲಿ ಎಕರೆಗೆ ಕೋಟ್ಯಾಂತರ ರೂ. ಪರಿಹಾರ ನೀಡುತ್ತಿರುವ ಸರ್ಕಾರ, ಇಲ್ಲಿ ಕೇವಲ 2.50 ಲ.ರೂ. ನಿಗದಿಪಡಿಸಿರುವುದು ಅನ್ಯಾಯವಾಗಿದೆ. ಅಧಿಕಾರಿಗಳ ಬೆದರಿಕೆಗೆ ರೈತರು ಮಣಿಯುವುದಿಲ್ಲ. ಮಠಾಧೀಶರು ಹಾಗು ವಿವಿಧ ಸಂಘಟನೆಗಳ ಬೆಂಬಲದೊಂದಿಗೆ ಮುಂದಿನ ದಿನಗಳಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದರು.

### ರೈತರ ಪ್ರಮುಖ ಬೇಡಿಕೆಗಳು

- 1939ರ ಮೈಸೂರು ಸರ್ಕಾರದ ಮೂಲ ದಾಖಲೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಬೇಕ
- ಭೂಸ್ವಾಧೀನ ಕಾಯ್ದೆ-2013ರ ಅನ್ವಯ ಹಕ್ಕುಪತ್ರ ಮತ್ತು ಪಹಣಿ ಹೊಂದಿರುವ 34 ಕುಟುಂಬಗಳಿಗೆ ಪೂರ್ಣ ಪ್ರಮಾಣದ ಪರಿಹಾರ ನೀಡಬೇಕ
- 1953ರಿಂದ ಭೂಮಿಯನ್ನು ಅನುಭವಿಸುತ್ತಿರುವ 59 ಕುಟುಂಬಗಳಿಗೆ ಕನಿಷ್ಠ ಶೇ.50ರಷ್ಟು ಪರಿಹಾರ ಮಂಜೂರು ಮಾಡಬೇಕು.
- ಆರು ವರ್ಷಗಳಿಂದ ಭೂಮಿ ಬಳಕೆ ಕಳೆದುಕೊಂಡ ರೈತರಿಗೆ ಬೆಳೆ ನಷ್ಟ ಪರಿಹಾರ ನೀಡಬೇಕು. ಜಮೀನು ಕಳೆದುಕೊಂಡ ರೈತರಿಗೆ ಸಮೀಪದ ಎರಡು ಕೆರೆಗಳಿಂದ ನೀರು ಹರಿಸುವ ವ್ಯವಸ್ಥೆ ಕಲ್ಪಿಸಬೇಕು.

ಗ್ರಾಮಸ್ಥರಾದ ವಸಂತಕುಮಾರ್, ದರ್ಶನ್, ಕೃಷ್ಣಮೂರ್ತಿ, ವೀರಭದ್ರೇಗೌಡ, ರೈತ ಸಂಘದ ಹೋಬಳಿ ಕಾರ್ಯದರ್ಶಿ ಗಂಗಾಧರಪ್ಪ, ಚಂದ್ರಮ್ಮ, ರಾಧಾ, ಗಾಯತ್ರಿ ಸೇರಿ ಹಲವರಿದ್ದರು.



# ಮೇಕೆದಾಟು ಯೋಜನೆ: ತಾಂತ್ರಿಕವಾಗಿ ಮುಂದುವರಿಯಿರಿ

## ರಾಜಕೀಯದಿಂದ ಸಮಸ್ಯೆ ಬಗೆಹರಿಯಲ್ಲ | ರಾಜ್ಯ ಸರ್ಕಾರಕ್ಕೆ ಹೆಚ್.ಡಿ.ಕೆ ಸಲಹೆ

• ಪ್ರಜೋದಯ ವರದಿ

**ಹಾಸನ:** ಮೇಕೆದಾಟು ಯೋಜನೆಯ ಡಿಪಿಆರ್ ಮರು ಪರಿಶೀಲನೆಗಾಗಿ ಕೇಂದ್ರ ಸರ್ಕಾರ ವಾಪಾಸ್ ಕಳುಹಿಸಿರುವ ಹಿನ್ನಲೆ ರಾಜ್ಯ ಸರ್ಕಾರ ತಾಂತ್ರಿಕವಾಗಿ ಅಗತ್ಯ ತಿದ್ದುಪಡಿಗಳನ್ನು ಮಾಡಿ ಯೋಜನೆಯನ್ನು ಮುಂದಕ್ಕೆ ಕೊಂಡೊಯ್ಯಬೇಕೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಸಲಹೆ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಈಗಾಗಲೇ ಪ್ರಧಾನಮಂತ್ರಿ ಹಾಗು ಕೇಂದ್ರ ಜಲಶಕ್ತಿ ಸಚಿವರಿಗೆ ಹಲವು ಬಾರಿ ಪತ್ರ ಬರೆದು, ವೈಯಕ್ತಿಕವಾಗಿಯೂ ಭೇಟಿ ಮಾಡಿ ಮೇಕೆದಾಟು ಜಲಾಶಯ ನಿರ್ಮಾಣಕ್ಕೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದಾರೆ. ಈ ಹಿಂದೆ ಬಸವರಾಜ ಬೊಮ್ಮಾಯಿ ಅವರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿಯೂ ಈ ಕುರಿತು ಪತ್ರ ಬರೆದಿದ್ದರು. ತಾವೂ ಸಹ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ತಿಳಿಸಿದರು.



ಮೇಕೆದಾಟು ಯೋಜನೆಯ ಡಿಪಿಆರ್‌ನಲ್ಲಿ 67 ಟಿಎಂಸಿ ನೀರು ಸಂಗ್ರಹಿಸುವ ಪ್ರಸ್ತಾವನೆ ಇದ್ದರೂ, ಕಾವೇರಿ ನ್ಯಾಯಮಂಡಳಿ 30 ಟಿಎಂಸಿ ನೀರು ಸಂಗ್ರಹಿಸಲು ಹಾಗು ಅದರಲ್ಲಿ 27 ಟಿಎಂಸಿ ನೀರನ್ನು ಬಳಕೆ ಮಾಡಲು ಅವಕಾಶ ನೀಡಿದೆ. ಆದ್ದರಿಂದ ಮೊದಲ ಹಂತದಲ್ಲಿ 30 ಟಿಎಂಸಿ ನೀರು ಸಂಗ್ರಹಿಸುವಂತೆ ಪರಿಷ್ಕೃತ ಡಿಪಿಆರ್ ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸುವುದು ಸೂಕ್ತ ಎಂಬುದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಡಿಪಿಆರ್‌ಗೆ ಕೆಲವು ಷರತ್ತುಗಳನ್ನು ವಿಧಿಸಿ ವಾಪಾಸ್ ಕಳುಹಿಸಲಾಗಿದ್ದು, ಅವುಗಳ ಕುರಿತು ಚರ್ಚೆ ನಡೆಸಿ, ದೇವೇಗೌಡರು ನೀಡಿರುವ ಸಲಹೆಗಳನ್ನು ರಾಜ್ಯ ಸರ್ಕಾರ ಸಮರ್ಪಕವಾಗಿ ಬಳಸಿಕೊಳ್ಳಬೇಕು. ಡಿ.ಕೆ.ಶಿವಕುಮಾರ್ ಅವರು ನಮ್ಮ ನೀರು, ನಮ್ಮ ಹಕ್ಕು ಎಂದು ಪಾದಯಾತ್ರೆ ನಡೆಸಿದರೆ ಸಾಲದು. ಕೇವಲ ರಾಜಕೀಯ ಹೇಳಿಕೆಗಳಿಂದ ಯೋಜನೆ ಜಾರಿಯಾಗುವುದಿಲ್ಲ. ತಾಂತ್ರಿಕವಾಗಿ ಏನು ಮಾಡಬೇಕೋ ಅದನ್ನು ಕಾರ್ಯರೂಪಕ್ಕೆ ತರಬೇಕು. ಮೊದಲ ಹಂತದಲ್ಲಿ ಎಷ್ಟು ನೀರು ಸಂಗ್ರಹಿಸಲಾಗುತ್ತದೆ, ಅದರಲ್ಲಿ ಬೆಂಗಳೂರಿನ ಕುಡಿಯುವ ನೀರಿಗೆ ಎಷ್ಟು ಬಳಕೆಯಾಗುತ್ತದೆ ಎಂಬುದನ್ನು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ಮನವರಿಕೆ ಮಾಡಿಕೊಡಬೇಕೆಂದು ಹೇಳಿದರು.

> **ಮೇಕೆದಾಟು ಯೋಜನೆ ವಿಚಾರದಲ್ಲಿ ತಮಿಳುನಾಡು ಮತ್ತು ಕರ್ನಾಟಕ ಸರ್ಕಾರಗಳು ವಾಸ್ತವ ಪರಿಸ್ಥಿತಿಯನ್ನು ಪರಿಗಣಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಕೇವಲ ರಾಜಕೀಯ ಲಾಭಕ್ಕಾಗಿ ಈ ವಿಚಾರವನ್ನು ದುರುಪಯೋಗಪಡಿಸಿಕೊಳ್ಳಬಾರದು.**
>
> **-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ಯೋಜನೆ ಕುರಿತು ಪರಿಸರ ಇಲಾಖೆ ಯಾವ ನಿರ್ಧಾರ ಕೈಗೊಳ್ಳುತ್ತದೆ ಎಂಬುದು ಗೊತ್ತಿಲ್ಲ. ಆದ್ದರಿಂದ ಈ ವಿಷಯದಲ್ಲಿ ರಾಜಕೀಯ ಬದಿಗಿಟ್ಟು ಕೇಂದ್ರ ಸರ್ಕಾರಕ್ಕೆ ಸಮರ್ಪಕ ಮಾಹಿತಿ ನೀಡಬೇಕು. ತಮಿಳುನಾಡು ಮುಖ್ಯಮಂತ್ರಿ ಭೇಟಿ ನೀಡಿದಾಗಲೂ ಯೋಜನೆಯಿಂದ ರಾಜ್ಯಗಳಿಗೆ ಆಗುವ ಸಾಧಕ- ಬಾಧಕಗಳನ್ನು ಮನವರಿಕೆ ಮಾಡಿಕೊಟ್ಟು, ರಾಜಕೀಯ ಪ್ರತಿಷ್ಠೆಗಾಗಿ ಯೋಜನೆಯನ್ನು ತಡೆಯಬಾರದೆಂದು ತಿಳಿಸಬೇಕೆಂದರು.

# ಇಂದು ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ

• ಪ್ರಜೋದಯ ವರದಿ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರು ಆ. 1ರ ಶನಿವಾರ ಸಾಂಸ್ಕೃತಿಕ ನಗರಿ ಮೈಸೂರಿಗೆ ಭೇಟಿ ನೀಡಲಿದ್ದಾರೆ.

ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಐತಿಹಾಸಿಕ ವಿವೇಕ ಸ್ಮಾರಕ ಹಾಗು ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ಸ್ವಾಮಿ ವಿವೇಕಾನಂದರು 1892ರಲ್ಲಿ ಮೈಸೂರು ಪ್ರವಾಸದ ವೇಳೆ ತಂಗಿದ್ದ ಐತಿಹಾಸಿಕ ಸ್ಥಳದಲ್ಲೇ ವಿವೇಕ ಸ್ಮಾರಕ ನಿರ್ಮಿಸಲಾಗಿದೆ. ದೇಶದ ಯುವಕರಿಗೆ ಸ್ವಾಮಿ ವಿವೇಕಾನಂದರ ಆದರ್ಶಗಳು, ಚಿಂತನೆ ಮತ್ತು ರಾಷ್ಟ್ರ ನಿರ್ಮಾಣದ ಸಂದೇಶವನ್ನು ಪರಿಚಯಿಸುವ ಉದ್ದೇಶದಿಂದ ಯುವ ಕೇಂದ್ರ ಅಭಿವೃದ್ಧಿಪಡಿಸಲಾಗಿದೆ.

ಪ್ರಧಾನಿ ಅವರ ಸಂಚಾರ ಸುಗಮವಾಗಲು ಹಾಗು ಭದ್ರತಾ ದೃಷ್ಟಿಯಿಂದ ಓವಲ್ ಮೈದಾನದಲ್ಲಿ ಮೂರು ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಿಸಲಾಗಿದೆ.

# ಮಲೆನಾಡು ಭಾಗದಲ್ಲಿ ಮಳೆಯ ಅಬ್ಬರ : ರಸ್ತೆಗಳು ಜಲಾವೃತ

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದಲ್ಲಿ ಪುಷ್ಯ ಮಳೆಯ ಅಬ್ಬರ ವೇಗ ಪಡೆದಿದ್ದು, ತಾಲ್ಲೂಕಿನಲ್ಲಿ ಶುಕ್ರವಾರ ಧಾರಾಕಾರವಾಗಿ ಮಳೆ ಸುರಿದಿದ್ದರಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಭಾರೀ ಮಳೆಯಿಂದ ಪಟ್ಟಣದ ಹಲವು ರಸ್ತೆಗಳು ಜಲಾವೃತಗೊಂಡು ವಾಹನ ಸವಾರರು, ಸಾರ್ವಜನಿಕರು ಪರದಾಡುವಂತಾಯಿತು. ಮಧ್ಯಭಾಗದ ರಸ್ತೆಗಳ ಮೇಲೆಯೇ ಮಳೆ ನೀರು ಹರಿಯಿತು. ಅಶೋಕ ರಸ್ತೆ, ಸರ್ಕಾರಿ ಪದವಿ ಪೂರ್ವ ಕಾಲೇಜು ಸಮೀಪ, ಆರ್.ಬಿ. ಸ್ಟೀಲ್ ಬಳಿಯ ರಸ್ತೆ ಹಾಗು ಅಗ್ರಹಾರ, ತೇಜಸ್ವಿ ವೃತ್ತ ಸಂಪರ್ಕಿಸುವ ಮಾರ್ಗದಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮಳೆ ನೀರು ರಸ್ತೆಯ ಮೇಲೆಯೇ ಹರಿದ ಪರಿಣಾಮ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಪಟ್ಟಣದ ಮುಖ್ಯ ರಸ್ತೆಯಲ್ಲಿರುವ ಆರ್.ಬಿ.ಸ್ಟೀಲ್ ಸಮೀಪದ ಒಳಚರಂಡಿ ಹೂಳು ಹಾಗು ಕಸದಿಂದ ಮುಚ್ಚಿಕೊಂಡಿರುವ ಪರಿಣಾಮ ಮಳೆ ನೀರು ಸರಾಗವಾಗಿ ಹರಿಯದೆ, ಸಮೀಪದ ಅಂಗಡಿಗಳಿಗೆ ನೀರು ನುಗ್ಗುವ ಪರಿಸ್ಥಿತಿ ನಿರ್ಮಾಣವಾಯಿತು. ಮಳೆಗಾಲಕ್ಕೂ ಮುನ್ನ ಒಳಚರಂಡಿ ಸ್ವಚ್ಛಗೊಳಿಸುವ ಕಾರ್ಯ ಸಮರ್ಪಕವಾಗಿ ನಡೆದಿಲ್ಲವೆಂಬ ಆರೋಪ ಸ್ಥಳೀಯರಿಂದ ವ್ಯಕ್ತವಾಗಿದ್ದು, ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ಗುರುವಾರ ರಾತ್ರಿಯಿಂದ ಆರಂಭವಾಗದ ಮಳೆ ಶುಕ್ರವಾರ ದಿನವಿಡಿ ಪಟ್ಟಣ ಸೇರಿ ತಾಲ್ಲೂಕಿನಾದ್ಯಂತ ಸುರಿದಿದ್ದರಿಂದ ಹೇಮಾವತಿ ನದಿಯ ಒಳಹರಿವು ಕೂಡ ಹೆಚ್ಚಾಗಿದೆ. ಮಂಗಳವಾರದಿಂದ ತಾಲ್ಲೂಕು ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಹೇಮಾವತಿ ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹ ಮಟ್ಟ ಕೊಂಚ ಹೆಚ್ಚಾಗುತ್ತಿದೆ.



ಕಳೆದ ನಾಲ್ಕು ದಿನಗಳಿಂದ ಅಣೆಕಟ್ಟೆಗೆ ಪ್ರತಿದಿನವೂ 5 ರಿಂದ 6 ಸಾವಿರ ಕ್ಯೂಸೆಕ್‌ನಷ್ಟು ಒಳಹರಿವು ಬರುತ್ತಿದೆ. ಜು.27ರಂದು ಜಲಾಶಯದಲ್ಲಿ 23.248 ಟಿಎಂಸಿಯಷ್ಟಿದ್ದ ನೀರಿನ ಮಟ್ಟ ಶುಕ್ರವಾರ ಬೆಳಿಗ್ಗೆ 6 ಗಂಟೆ ವೇಳೆಗೆ 25.019 ಟಿಎಂಸಿಗೆ ಏರಿಕೆಯಾಗಿದೆ. ಜಲಾಶಯ ಭರ್ತಿಯಾಗಲು ಇನ್ನೂ 12 ಟಿಎಂಸಿಎಷ್ಟು ನೀರಿನ ಕೊರತೆ ಎದುರಾಗಿದೆ. ಕಳೆದ ವರ್ಷ ಇದೇ ವೇಳೆಗೆ 36.137 ಟಿಎಂಸಿಯಷ್ಟು ನೀರು ಸಂಗ್ರಹವಾಗಿತ್ತು.

# ಅತಿಥಿ ಉಪನ್ಯಾಸಕರ ನೇಮಕಕ್ಕೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಸಂಕಷ್ಟಕ್ಕೀಡಾಗಿದ್ದು, ಶೀಘ್ರ ಖಾಲಿ ಹುದ್ದೆಗೆ ಅತಿಥಿ ಉಪನ್ಯಾಸಕರನ್ನು ನೇಮಿಸಬೇಕೆಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಎಬಿವಿಪಿ ಜಿಲ್ಲಾ ಸಂಚಾಲಕ ವರಣ್ ಪುರಾಣಿಕ್ ಅವರು ಮಾತನಾಡಿ, ರಾಜ್ಯದಲ್ಲಿ 430ಕ್ಕೂ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿವೆ. ಅತಿಥಿ ಉಪನ್ಯಾಸಕರ ನೇಮಕಾತಿ ವಿಳಂಬ ಹಾಗು ಖಾಯಂ ಬೋಧಕರ ಕೊರತೆಯಿಂದ ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಜೂನ್-ಜುಲೈನಲ್ಲಿ ಕಾಲೇಜುಗಳು ಆರಂಭವಾದರೂ ಬಿಎ, ಬಿಕಾಂ, ಬಿಬಿಎ, ಬಿಸಿಎ ಸೇರಿ ವಿವಿಧ ಕೋರ್ಸ್‌ಗಳ ಪ್ರಮುಖ ವಿಷಯಗಳಿಗೆ ಬೋಧಕರೇ ಇಲ್ಲ. ಅದರಿಂದ ವಿದ್ಯಾರ್ಥಿಗಳು ತರಗತಿಗಳಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರಿ ಕಾಲೇಜುಗಳ ಫಲಿತಾಂಶವೂ ಕುಸಿಯುತ್ತಿದೆ ಎಂದರು.




ಸಾವಿರಾರು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇದ್ದರೂ ಕಳೆದ ಎರಡು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಪ್ರತಿವರ್ಷ ಅತಿಥಿ ಉಪನ್ಯಾಸಕರ ನೇಮಕಾತಿಯೂ ಶೈಕ್ಷಣಿಕ ವರ್ಷ ಆರಂಭವಾದ ಹಲವು ತಿಂಗಳ ಬಳಿಕ ನಡೆಯುತ್ತಿರುವುದು ಬಡ ಹಾಗು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ಯಾಯ ಎಸಗಲಾಗುತ್ತಿದೆಂದು ಆರೋಪಿಸಿದರು.

» ನಾಲ್ಕನೇ ಪುಟದಲ್ಲಿ

## ಗುರು ವಂದನಾ ಸಮಾರಂಭದಲ್ಲಿ ನಿರ್ಮಲಾನಂದನಾಥ ಶ್ರೀ

# ಲೋಕ ಸ್ಮರಿಸುವುದು ಜ್ಞಾನಿಗಳನ್ನೇ ಹೊರತು ಬಿಲೇನಿಯರ್‌ಗಳನ್ನಲ್ಲ

• ಪ್ರಜೋದಯ ವರದಿ

**ಹಾಸನ :** ಸಾಕಷ್ಟು ಸಂಪತ್ತು ಇದ್ದರೂ ಎಲ್ಲವನ್ನೂ ತ್ಯಜಿಸಿ ತಮ್ಮಲ್ಲಿರುವ ಜ್ಞಾನವನ್ನು ಇತರರಿಗೆ ಹಂಚಿದ ಬುದ್ಧ, ವೇದ ವ್ಯಾಸರನ್ನು ನಾವು ಸಾವಿರಾರು ವರ್ಷಗಳಿಂದ ಸ್ಮರಿಸುತ್ತಿದ್ದೇವೆಯೇ ಹೊರತು ಬಿಲೇನಿಯರ್‌ಗಳನ್ನಲ್ಲ. ಗುರುವಿಗೆ ಅಂತಹ ಮಹತ್ವದ ಸ್ಥಾನಮಾನವಿದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಹೇಳಿದರು.

ನಗರದ ಆದಿಚುಂಚನಗಿರಿ ಶಾಖಾ ಮಠದಲ್ಲಿ ಗುರುವಾರ ಸಂಜೆ ನಡೆದ ಗುರು ಪೂರ್ಣಿಮೆ ಹಾಗು ಗುರು ತೋರಿದ ದಾರಿ ತಿಂಗಳ ಮಾಮನ ತೇರು 143ನೇ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಬುದ್ಧನ ಜೀವನದ ಮೂರು ಪ್ರಮುಖ ಘಟ್ಟಗಳಾದ ಜನನ, ಜ್ಞಾನೋದಯ ಹಾಗು ಮಹಾಪರಿನಿರ್ವಾಣ ಮೂರೂ ಪೂರ್ಣಿಮೆಯಂದೇ ಸಂಭವಿಸಿದ್ದು ವಿಶೇಷ. ಆತ್ಮಜ್ಞಾನ ಲಭಿಸಿದ ನಂತರವೂ ಜ್ಞಾನಿಗಳು ತಮ್ಮ ಶರೀರವನ್ನು ಕಾಯ್ದುಕೊಳ್ಳುವುದು ಸ್ವಂತಕ್ಕಲ್ಲ, ಸಮಾಜಕ್ಕೆ ಜ್ಞಾನವನ್ನು ಪಸರಿಸಲು ಅವರು ಶರೀರ ಕಾಪಾಡಿಕೊಂಡರು. ಶರೀರವು ಧರ್ಮ ಸಾಧನೆಗೆ ವಾಹನವಿದ್ದಂತೆ ಎಂದು ಮನುಷ್ಯ ಜೀವನದ ಉದ್ದೇಶವನ್ನು ವಿವರಿಸಿದರು.



ಗೌತಮ ಬುದ್ಧ ತನಗೆ ಜ್ಞಾನೋದಯವಾದ ಬಳಿಕ ಅದನ್ನು ಸುಮ್ಮನೆ ಯಾರ ಬಳಿಯೋ ಹೇಳಿ ಮುಗಿಸಲಿಲ್ಲ. ಆ ಜ್ಞಾನಕ್ಕಾಗಿ ಆತ ತನ್ನ ರಾಜ ವೈಭವ, ಸುಂದರ ಹೆಂಡತಿ ಹಾಗು ಮಗುವನ್ನೇ ಬಿಟ್ಟು ಬಿಹಾರದ ಬೋಧಗಯಾದಿಂದ ಕಾಶಿಯ ಸಾರನಾಥಕ್ಕೆ ಎರಡು ತಿಂಗಳು ಕಾಲ್ನಡಿಗೆಯಲ್ಲೇ ಸಾಗಿದರು. ಅಲ್ಲಿ ತಪಸ್ಸಿನಲ್ಲಿದ್ದ ಐವರು ಸಾಧಕರಿಗೆ ಧರ್ಮೋಪದೇಶ ನೀಡುವ ಮೂಲಕ ಧರ್ಮಚಕ್ರ ಪ್ರವರ್ತನ ಮಾಡಿದರು. ಆ ಪವಿತ್ರ ದಿನವೂ ಇದೇ ಗುರುಪೂರ್ಣಿಮೆಯಾಗಿತ್ತು ಎಂದು ಶ್ರೀಗಳು ವಿವರಿಸಿದರು.

ಜ್ಞಾನ ಪರಂಪರೆಯನ್ನು ಅತ್ಯಂತ ವ್ಯವಸ್ಥಿತವಾಗಿ ಮುಂದಿನ ಪೀಳಿಗೆಗೆ ತಲುಪಿಸಿದ ಶ್ರೇಷ್ಠ ಕೆಲಸವನ್ನು ವೇದವ್ಯಾಸ ಮಹರ್ಷಿ ಮಾಡಿದ್ದಾರೆ. ತಾಯಿಯಾದವಳು ಮಗುವಿಗೆ ಜೀರ್ಣವಾಗುವಂತೆ ಆಹಾರ ನೀಡುವ ಹಾಗೆ ಮಹರ್ಷಿಗಳು ಜ್ಞಾನವನ್ನು ನಾಲ್ಕು ವೇದಗಳು (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ) ಹಾಗು 18 ಪುರಾಣಗಳಾಗಿ ವಿಂಗಡಿಸಿದರು. ಮುಂದುವರಿದು ವ್ಯಾಸರ ಶ್ಲೋಕ ಉಲ್ಲೇಖಿಸಿದ ಶ್ರೀಗಳು, ಪರೋಪಕಾರಾಯ ಪುಣ್ಯಾಯ, ಪಾಪಾಯ ಪರಪೀಡನಂ ಅಂದರೆ ಅನ್ಯರಿಗೆ ಸಹಾಯ ಮಾಡುವುದೇ ಪುಣ್ಯ, ಇತರರಿಗೆ ಪೀಡನೆ ಅಥವಾ ತೊಂದರೆ ಕೊಡುವುದೇ ಪಾಪ ಎಂಬ ಸರಳ ಸತ್ಯವನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

### ಬಾಲಗಂಗಾಧರನಾಥ ಶ್ರೀ ಸ್ಮರಣೆ

ಆದಿಚುಂಚನಗಿರಿ ಮಠದ ಪರಂಪರೆ ಹಾಗು 71ನೇ ಜಗದ್ಗುರುಗಳ ಸೇವೆಯನ್ನು ಸ್ಮರಿಸಿದ ಶ್ರೀಗಳು, ಕೇವಲ ಭೌತಿಕ ಸಂಘಟನೆ ಅಥವಾ ಶಾಲಾ-ಕಾಲೇಜುಗಳ ಮೂಲಕ ಸಿಗುವ ಭೌತಿಕ ಪ್ರಬುದ್ಧತೆ ಮಾತ್ರ ಸಾಲದು. ವ್ಯಕ್ತಿಗೆ ಆಧ್ಯಾತ್ಮಿಕ ವಿಕಾಸ ಮತ್ತು ಅರಿವು ಮೂಡದ ಹೊರತು ಆತ ಅಜ್ಞಾನದ ಗುಲಾಮನಾಗಿಯೇ ಉಳಿಯುತ್ತಾನೆ. ಭೌತಿಕ, ಬೌದ್ಧಿಕ ಹಾಗು ಆಧ್ಯಾತ್ಮಿಕ ಈ ಮೂರೂ ರಂಗಗಳಲ್ಲಿ ಸೇವೆ ಸಲ್ಲಿಸುವುದು ಶ್ರೇಷ್ಠ ಕಾರ್ಯವೆಂದು ನುಡಿದರು.

ಜೀವನದಲ್ಲಿ ಸಾಕಷ್ಟು ಇಬ್ಬಂದಿಯ ಸ್ಥಿತಿ ನಿರ್ಮಾಣವಾಗುತ್ತದೆ. ಎಲ್ಲವನ್ನೂ ನಾನೇ ಮಾಡುತ್ತೇನೆಂದು ಹೊರಟರೆ ನಮ್ಮ ಜೀವನ ತಂತಿ ಮೇಲಿನ ನಡಿಗೆಯಾಗುತ್ತದೆ. ಗುರುವಿನ ಕಾರುಣ್ಯವಿಲ್ಲದೆ ಸಾಧನೆ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕುವೆಂಪು ಅವರ ಜ್ಞಾನವನ್ನು ನಾವೆಲ್ಲರೂ ಅರಿಯಬೇಕು. ಕುವೆಂಪು ಸುಮ್ಮನೆ ರಾಷ್ಟ್ರಕವಿ, ಮಹಾನ್ ದಾರ್ಶನಿಕ ಆಗಿಲ್ಲವೆಂದು ಅವರ ಕವಿತೆಗಳ ವಾಚನದ ಮೂಲಕ ಜ್ಞಾನದ ಅರಿವನ್ನು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉಣಬಡಿಸಿದರು.

ಕುವೆಂಪು ಅವರು ಶ್ರೇಷ್ಠ ಆಧ್ಯಾತ್ಮಿಕ ವ್ಯಕ್ತಿಯಾಗಿದ್ದರು. ಸಾಹಿತ್ಯ ಬರೆದ ಮಾತ್ರಕ್ಕೆ ಕುವೆಂಪು ಕವಿಯಲ್ಲ. ಅವರ ಸಾಧನೆ ಹಿಂದೆ ಇರುವುದು ಗುರು ಹಾಗು ಆಧ್ಯಾತ್ಮ. ಪ್ರಜ್ಞೆ ಅನಾವರಣಗೊಂಡ ವ್ಯಕ್ತಿ ಏನೇ ಮಾತನಾಡಿದರೂ ಅದು ಆಧ್ಯಾತ್ಮವಾಗಿರುತ್ತದೆಂದರು.

» ನಾಲ್ಕನೇ ಪುಟದಲ್ಲಿ

# ಚೇತರಿಸಿದ ಉತ್ಪಾದನೆ, ಐಟಿ: ಎಐ ಆತಂಕ ದೂರ!

> ಭಾರತದ 2026ರ ಜೂನ್ ತಿಂಗಳ ಉದ್ಯಮ ವಲಯದ ಉತ್ಪಾದನೆಯು ಕಳೆದ ಎರಡು ವರ್ಷಗಳ ಅತ್ಯಂತ ವೇಗವಾಗಿ ಬೆಳೆದಿದೆ. ಉತ್ಪಾದನಾ ಕ್ಷೇತ್ರದಲ್ಲಿ ಉಂಟಾಗಿರುವ ಗಣನೀಯ ಚೇತರಿಕೆಯೇ ಇದಕ್ಕೆ ಕಾರಣ ಎನ್ನುವುದು ಮತ್ತೊಂದು ವಿಶೇಷ. ಎರಡನೆಯದಾಗಿ ಐಟಿ ಸೆಕ್ಟರ್‌ನಲ್ಲಿ ತೀವ್ರ ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದ ಕೃತಕ ಬುದ್ಧಿಮತ್ತೆಯ ಕುರಿತ ಭಯ ಕ್ರಮೇಣ ಕಡಿಮೆಯಾಗುತ್ತಿರುವ ಲಕ್ಷಣ ಕಾಣಿಸುತ್ತಿದೆ.



ಮನಿ ಮೈಂಡೆಡ್

ದೇಶದ ಆರ್ಥಿಕತೆಯ ಎರಡು ಪ್ರಮುಖ ಕ್ಷೇತ್ರಗಳಾದ ಉತ್ಪಾದನಾ ವಲಯ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳು ಜೂನ್ ತಿಂಗಳಲ್ಲಿ ಗಮನಾರ್ಹ ಚೇತರಿಕೆಯನ್ನು ದಾಖಲಿಸಿದ್ದು, ಮಾರುಕಟ್ಟೆಯಲ್ಲಿ ಹೊಸ ಉತ್ಸಾಹ ಮೂಡಿಸಿವೆ. ಐಟಿ ಸೆಕ್ಟರ್‌ನಲ್ಲಿ ತೀವ್ರ ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದ ಕೃತಕ ಬುದ್ಧಿಮತ್ತೆಯ ಕುರಿತ ಭಯ ಕ್ರಮೇಣ ಕಡಿಮೆಯಾಗುತ್ತಿರುವ ಲಕ್ಷಣ ಕಾಣಿಸುತ್ತಿದೆ.

ಭಾರತದ 2026ರ ಜೂನ್ ತಿಂಗಳ ಉದ್ಯಮ ವಲಯದ ಉತ್ಪಾದನೆಯು ಕಳೆದ ಎರಡು ವರ್ಷಗಳ ಅತ್ಯಂತ ವೇಗವಾಗಿ ಬೆಳೆದಿದೆ. ಉತ್ಪಾದನಾ ಕ್ಷೇತ್ರದಲ್ಲಿ ಉಂಟಾಗಿರುವ ಗಣನೀಯ ಚೇತರಿಕೆಯೇ ಇದಕ್ಕೆ ಕಾರಣ ಎನ್ನುವುದು ಮತ್ತೊಂದು ವಿಶೇಷ. ಎರಡನೆಯದಾಗಿ ಐಟಿ ಸೆಕ್ಟರ್‌ನಲ್ಲಿ ತೀವ್ರ ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದ ಕೃತಕ ಬುದ್ಧಿಮತ್ತೆಯ ಕುರಿತ ಭಯ ಕ್ರಮೇಣ ಕಡಿಮೆಯಾಗುತ್ತಿರುವ ಲಕ್ಷಣ ಕಾಣಿಸುತ್ತಿದೆ.

ಕುಸಿತಕ್ಕೊಳಗಾಗಿದ್ದ ಐಟಿ ಸ್ಟಾಕ್ ಚೇತರಿಸುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಅಂತೂ ದೇಶದ ಆರ್ಥಿಕತೆಯ ಎರಡು ಪ್ರಮುಖ ಕ್ಷೇತ್ರಗಳಾದ ಉತ್ಪಾದನಾ ವಲಯ ಹಾಗೂ ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳು ಜೂನ್ ತಿಂಗಳಲ್ಲಿ ಗಮನಾರ್ಹ ಚೇತರಿಕೆಯನ್ನು ದಾಖಲಿಸಿದ್ದು, ಮಾರುಕಟ್ಟೆಯಲ್ಲಿ ಹೊಸ ಉತ್ಸಾಹ ಮೂಡಿಸಿವೆ.

ಭಾರತದ ಕೈಗಾರಿಕಾ ಉತ್ಪಾದನೆಯು ಜೂನ್‌ನಲ್ಲಿ ಶೇಕಡಾ 7.3ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಇದು 2024ರ ಜುಲೈನ ನಂತರದ ಅತ್ಯಂತ ವೇಗದ ಬೆಳವಣಿಗೆಯಾಗಿದೆ. ಸರಕಾರದ ಬಂಡವಾಳ ವೆಚ್ಚ ಹೆಚ್ಚಳವಾಗಿರುವುದು ಮತ್ತು ವಿದ್ಯುತ್ ಉತ್ಪಾದನೆಯ ನಿರಂತರ ವಿಸ್ತರಣೆಯಿಂದಾಗಿ ಉತ್ಪಾದನಾ ಕ್ಷೇತ್ರದ ಚಟುವಟಿಕೆಗಳಿಗೆ ಪುಷ್ಟಿ ನೀಡಿದೆ.

ರಾಯಿಟರ್ಸ್ ನಡೆಸಿದ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಅರ್ಥಶಾಸ್ತ್ರಜ್ಞರು, ಮೇ ತಿಂಗಳ ಶೇಕಡಾ 5.0ರ (ಪರಿಷ್ಕೃತ) ಬೆಳವಣಿಗೆಯ ಬಳಿಕ ಜೂನ್‌ನಲ್ಲಿ ಕೈಗಾರಿಕಾ ಉತ್ಪಾದನೆ ಶೇಕಡಾ 5.7ಕ್ಕೆ ಏರಿಕೆಯಾಗಲಿದೆ ಎಂದು ನಿರೀಕ್ಷಿಸಿದ್ದರು. ಆದರೆ ನಿರೀಕ್ಷೆಯನ್ನೂ ಮೀರಿ ಇದೀಗ ಪ್ರಗತಿ ದಾಖಲಾಗಿರುವುದು ಗಮನಾರ್ಹ. ಅರ್ಥಶಾಸ್ತ್ರಜ್ಞರಾದ ಗೌರವ್ ಸೇನ್ ಗುಪ್ತಾ ಪ್ರಕಾರ, ಇದು ನಿರೀಕ್ಷೆಗಿಂತ ಉತ್ತಮವಾದ ಫಲಿತಾಂಶವಾಗಿದೆ.

ವ್ಯವಸ್ಥೆಯಲ್ಲಿ ಸುಸ್ಥಿರ ಬಳಕೆಯ ಆಧಾರದ ಮೇಲೆ ಮುಂದಿನ ಆರ್ಥಿಕ ಚಟುವಟಿಕೆಗಳು ಇದೇ ರೀತಿ ಮುಂದುವರಿಯುವ ವಿಶ್ವಾಸ ಇದೆ ಎಂದಿದ್ದಾರೆ. ಇಕಾನಮಿನಲ್ಲಿ ಕನ್ಸಂಪ್ಶನ್ ಪ್ರಾಮುಖ್ಯತೆ ಇದೆ. ಹಾಗೆಂದರೇನು? ಸರಳ. ನಾವೆಲ್ಲರೂ, ನಮ್ಮ ಕುಟುಂಬಗಳು, ಸಮಾಜವು ಅಂತಿಮವಾಗಿ ಬಳಸುವ ಉತ್ಪನ್ನಗಳು ಮತ್ತು ಸೇವೆಗಳ ವಿಷಯವನ್ನೇ ಕನ್ಸಂಪ್ಶನ್ ಅಥವಾ ಬಳಕೆಗಳು. ಇದು ಹೂಡಿಕೆಗಿಂತ ಭಿನ್ನವಾದದ್ದು.

ಹೂಡಿಕೆ ಎಂದರೆ ಭವಿಷ್ಯದ ಆದಾಯಕ್ಕಾಗಿ ಮಾಡುವ ವೆಚ್ಚ, ಯಾವುದೇ ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಬಳಕೆ ವೆಚ್ಚವೇ ಸಿಂಹಪಾಲು ವಹಿಸುತ್ತದೆ. ಇದು ವ್ಯಕ್ತಿಗಳ ವೈಯಕ್ತಿಕ ಬಳಕೆ ಮತ್ತು ಸರಕಾರದ ಬಳಕೆ ಎಂಬ ಎರಡು ವಿಭಾಗಗಳನ್ನು ಒಳಗೊಂಡಿದ್ದು, ದೇಶದ ಒಟ್ಟು ಬೇಡಿಕೆಯನ್ನು ನಿರ್ಣಯಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಮೇ ತಿಂಗಳಲ್ಲಿ, ಸರಕಾರವು ಕಾರ್ಖಾನೆ ಉತ್ಪಾದನೆಯನ್ನು ಲೆಕ್ಕ ಹಾಕಲು ಸಗಟು ಬೆಲೆಗಳ ಬದಲಿಗೆ ಉತ್ಪಾದಕರ ಬೆಲೆಗಳಿಗೆ ಬದಲಾಯಿಸಿಕೊಂಡಿದೆ. ಗುಡ್ ನ್ಯೂಸ್ ಏನೆಂದರೆ, ಜೂನ್‌ನಲ್ಲಿ ಉತ್ಪಾದನಾ ಕ್ಷೇತ್ರದ ಉತ್ಪಾದನೆಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡಾ 7.8ರಷ್ಟು ಬೆಳವಣಿಗೆ ಕಂಡಿದೆ. ಇದು ಮೇ ತಿಂಗಳಲ್ಲಿ ಪರಿಷ್ಕೃತ ಶೇಕಡಾ 5.2ರಷ್ಟಿತ್ತು.

ವಿದ್ಯುತ್ ಉತ್ಪಾದನೆಯು ಜೂನ್‌ನಲ್ಲಿ ವಾರ್ಷಿಕ ಆಧಾರದ ಮೇಲೆ ಶೇಕಡಾ 10.6ರಷ್ಟು ಹೆಚ್ಚಾಗಿದೆ (ಒಂದು ತಿಂಗಳ ಹಿಂದೆ ಪರಿಷ್ಕೃತ ಶೇಕಡಾ 10.3ರಷ್ಟು ಹೆಚ್ಚಳವಾಗಿತ್ತು). ಗಣಿಗಾರಿಕೆ ಚಟುವಟಿಕೆಯು ಜೂನ್‌ನಲ್ಲಿ ಶೇಕಡಾ 1ರಷ್ಟು ಏರಿಕೆಯಾಗಿದೆ. ಮೇ ತಿಂಗಳಲ್ಲಿ ಇದು ಪರಿಷ್ಕೃತ ಶೇಕಡಾ 1.4ರಷ್ಟು ಕುಸಿತ ಕಂಡಿತ್ತು.

ಕಾರುಗಳು ಮತ್ತು ಸ್ಮಾರ್ಟ್ ಫೋನ್‌ಗಳು ಸೇರಿದಂತೆ ಗ್ರಾಹಕ ಬಳಕೆಯ ದೀರ್ಘಾವಧಿ ಬಳಕೆಯ ಸರಕುಗಳ ಉತ್ಪಾದನೆಯು ಜೂನ್‌ನಲ್ಲಿ ಶೇಕಡಾ 7.7ರಷ್ಟು ಏರಿಕೆಯಾಗಿದೆ. ಒಂದು ತಿಂಗಳ ಹಿಂದೆ ಪರಿಷ್ಕೃತ ಶೇಕಡಾ 8ರಷ್ಟು ಹೆಚ್ಚಳವಾಗಿತ್ತು. ಬಂಡವಾಳ ಸರಕುಗಳ ಉತ್ಪಾದನೆಯು ಜೂನ್‌ನಲ್ಲಿ ಶೇಕಡಾ 14.2ರಷ್ಟು ಹೆಚ್ಚಾಗಿದೆ. ಮೇ ತಿಂಗಳಲ್ಲಿ ಪರಿಷ್ಕೃತ ಶೇಕಡಾ 15.5ರಷ್ಟು ಹೆಚ್ಚಳವಾಗಿತ್ತು.

ಭಾರತೀಯ ಐಟಿ ಷೇರುಗಳು ಜೂನ್‌ನಲ್ಲಿ ಗಮನಾರ್ಹವಾದ ಚೇತರಿಕೆ ಕಂಡಿದ್ದು, ಮಾರುಕಟ್ಟೆ ಮೌಲ್ಯದಲ್ಲಿ ಭಾರಿ ಏರಿಕೆಯನ್ನು ದಾಖಲಿಸಿ ಪ್ರಮುಖ ಐಟಿ ಕಂಪನಿಗಳು ಗಣನೀಯ ಲಾಭ ಗಳಿಸಿವೆ. ಇದು ಈ ಕ್ಷೇತ್ರದ ಒಟ್ಟಾರೆ ಮಾರುಕಟ್ಟೆ ಬಂಡವಾಳ ಮೌಲ್ಯವನ್ನು ಹೆಚ್ಚಿಸಿದೆ. ಇದು ತಾತ್ಕಾಲಿಕ ಏರಿಕೆಯೋ, ಶಾಶ್ವತವೋ ಎಂಬ ಪ್ರಶ್ನೆ ಇದ್ದರೂ, ಐಟಿ ಷೇರುಗಳು ಜುಲೈ ತಿಂಗಳಲ್ಲಿ ಅದ್ಭುತವಾದ ತಿರುವನ್ನು ಪಡೆದುಕೊಂಡು ತಿಂಗಳುಗಳ ಹೂಡಿಕೆದಾರರ ನಿರಾಶೆಯನ್ನು ನಿವಾರಿಸಿದೆ. ಐಟಿ ಕಂಪನಿಗಳ ಮಾರುಕಟ್ಟೆ ಮೌಲ್ಯದಲ್ಲಿ ರೂ. 3.82 ಲಕ್ಷ ಕೋಟಿಗಳಷ್ಟು ಹೆಚ್ಚಳವಾಗಿದೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಐಟಿ ಉದ್ಯೋಗಗಳಿಗೆ ಮತ್ತು ಕಂಪನಿಗಳಿಗೆ ದೊಡ್ಡ ಹೊಡೆತ ಬೀಳಬಹುದು ಎಂಬ ಭೀತಿಯಿಂದ ಹಿಂದೆ ಹೂಡಿಕೆದಾರರು ನಕಾರಾತ್ಮಕ ಮನೋಭಾವ ಹೊಂದಿದ್ದರು. ಆದರೆ ಆ ಭಯ ನಿವಾರಣೆಯಾಗಿ, ಷೇರು ಮಾರುಕಟ್ಟೆಯಲ್ಲಿ ಭಾರಿ ಏರಿಕೆ ಕಂಡುಬಂದಿದ್ದು ಹೂಡಿಕೆದಾರರ ವಿಶ್ವಾಸ ಮರಳಿದೆ.

ಉತ್ಪಾದನಾ ವಲಯ ದೇಶದ ಒಟ್ಟು ದೇಶೀಯ ಉತ್ಪನ್ನಕ್ಕೆ ನೇರವಾಗಿ ಕೊಡುಗೆ ನೀಡುತ್ತದೆ. ಕೃಷಿ ಕ್ಷೇತ್ರದಿಂದ ಹೊರ ಬರುವ ಜನರಿಗೆ ಮತ್ತು ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುತ್ತದೆ.

ಭಾರತದ ಸೇವಾ ವಲಯ ಮತ್ತು ರಫ್ತು ವಲಯದಲ್ಲಿ ಐಟಿ ಸೆಕ್ಟರ್ ಸಿಂಹಪಾಲು ಹೊಂದಿದೆ. ವಿದೇಶಿ ವಿನಿಮಯವನ್ನು ತರುವ ಮೂಲಕ ದೇಶದ ಆರ್ಥಿಕ ಸ್ಥಿರತೆಯನ್ನು ಕಾಪಾಡುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಕೌಶಲ್ಯವಿರುವ ಮತ್ತು ಕೌಶಲ್ಯರಹಿತ ಲಕ್ಷಾಂತರ ಯುವಕರಿಗೆ ಕಾರ್ಖಾನೆಗಳು, ಎಂಎಸ್‌ಎಂಇ ಘಟಕಗಳು ಹಾಗೂ ಮೂಲಸೌಕರ್ಯ ವಲಯದಲ್ಲಿ ನೇರ ಹಾಗೂ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ.

ಎಂಜಿನಿಯರಿಂಗ್ ಪದವೀಧರರು ಮತ್ತು ತಂತ್ರಜ್ಞಾನಿಗಳಿಗೆ ಅತ್ಯಂತ ಆಕರ್ಷಕ ಉದ್ಯೋಗಗಳನ್ನು ನೀಡುವುದಲ್ಲದೆ, ದೇಶದ ಯುವ ಸಮುದಾಯದ ಜೀವನಮಟ್ಟವನ್ನು ಸುಧಾರಿಸಲು ಸಹಾಯ ಮಾಡಿದೆ. ಉತ್ಪಾದನಾ ವಲಯವು ದೇಶದ ಒಳಗಿನ ಜನಸಂಖ್ಯೆಯ ದೈನಂದಿನ ಹಾಗೂ ಕೈಗಾರಿಕಾ ಉತ್ಪನ್ನಗಳ ಬೇಡಿಕೆಯನ್ನು ಪೂರೈಸಿದರೆ, ಐಟಿ ಸೆಕ್ಟರ್ ಜಾಗತಿಕ ಮಟ್ಟದಲ್ಲಿ ಅಮೆರಿಕ, ಯುರೋಪ್ ಮುಂತಾದ ದೇಶಗಳ ಜೊತೆ ವ್ಯವಹರಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಪ್ರಾಬಲ್ಯವನ್ನು ಮೆರೆಯುತ್ತದೆ.

ಉತ್ಪಾದನಾ ವಲಯದಲ್ಲಿ ಯಾಂತ್ರೀಕರಣ, ಸ್ವಯಂಚಾಲಿತ ತಂತ್ರಜ್ಞಾನಗಳು ಮತ್ತು ಐಟಿ ಕ್ಷೇತ್ರದಲ್ಲಿ ಕ್ಲೌಡ್ ಕಂಪ್ಯೂಟಿಂಗ್, ಎಐ ಮುಂತಾದ ಆಧುನಿಕ ತಂತ್ರಜ್ಞಾನಗಳ ಅಳವಡಿಕೆಯು ಇಡೀ ದೇಶದ ತಾಂತ್ರಿಕ ಮೌಲ್ಯವನ್ನು ಹೆಚ್ಚಿಸುತ್ತವೆ.

ಉತ್ಪಾದನಾ ರಂಗ ದೇಶದ ಭೌತಿಕ ಉತ್ಪಾದನೆ ಮತ್ತು ಆಧಾರವಾದರೆ, ಐಟಿ ಸೆಕ್ಟರ್ ದೇಶದ ಬುದ್ಧಿವಂತಿಕೆ ಮತ್ತು ಡಿಜಿಟಲ್ ಶಕ್ತಿಯಾಗಿದೆ. ಈ ಎರಡೂ ಕ್ಷೇತ್ರಗಳು ಕೈಜೋಡಿಸಿದಾಗ ಮಾತ್ರ ದೇಶವು ಸಮತೋಲಿತ ಮತ್ತು ವೇಗದ ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಧ್ಯ. ಐಟಿ ಸ್ಟಾಕ್ ಚೇತರಿಕೆಯು ಕರ್ನಾಟಕ ಮತ್ತು ಬೆಂಗಳೂರಿನ ದೃಷ್ಟಿಯಿಂದಲೂ ಸ್ವಾಗತಾರ್ಹ.

ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಐಟಿ ಇಂಡಸ್ಟ್ರಿಯ ಪಾತ್ರ ಪ್ರಮುಖವಾಗಿದೆ. ಬೆಂಗಳೂರು ಕೇವಲ ದೊಡ್ಡ ಕಂಪನಿಗಳಿಗೆ ಮಾತ್ರವಲ್ಲದೆ, ಹೊಸ ಆಲೋಚನೆಗಳೊಂದಿಗೆ ಬರುವ ನೂರಾರು ಯುವ ಉದ್ಯಮಿಗಳ ಸ್ಟಾರ್ಟ್‌ಅಪ್‌ಗಳಿಗೆ ಕಾಶಿಯಾಗಿದೆ. ಫಿನ್‌ಟೆಕ್, ಇ-ಕಾಮರ್ಸ್ ಮತ್ತು ಎಐ ರಂಗದಲ್ಲಿ ಹೊಸ ಆವಿಷ್ಕಾರಗಳು ಇಲ್ಲಿ ನಿರಂತರವಾಗಿ ನಡೆಯುತ್ತಿವೆ. ಜಗತ್ತಿನಾದ್ಯಂತ ಇರುವ ಕಂಪನಿಗಳು ತಮ್ಮ ತಾಂತ್ರಿಕ ಮತ್ತು ವ್ಯವಹಾರಿಕ ಅಗತ್ಯಗಳಿಗಾಗಿ ಬೆಂಗಳೂರಿನಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ಸ್ಥಾಪಿಸಲು ಹೆಚ್ಚು ಆದ್ಯತೆ ನೀಡುತ್ತಿವೆ.

ಇದು ಭಾರತದ ರಫ್ತು ವಲಯಕ್ಕೆ ಬಲ ತುಂಬಿದೆ. ಲಕ್ಷಾಂತರ ಎಂಜಿನಿಯರ್‌ಗಳು, ತಂತ್ರಜ್ಞಾನಿಗಳು ಮತ್ತು ಡಿಜಿಟಲ್ ತಜ್ಞರಿಗೆ ಬೆಂಗಳೂರು ನೇರ ಉದ್ಯೋಗ ನೀಡಿದೆ. ಇದರೊಂದಿಗೆ ಹೋಟೆಲ, ಸಾರಿಗೆ, ರಿಯಲ್ ಎಸ್ಟೇಟ್ ಮತ್ತು ಇತರೆ ಸೇವಾ ವಲಯಗಳಲ್ಲೂ ಲಕ್ಷಾಂತರ ಪರೋಕ್ಷ ಉದ್ಯೋಗಗಳು ಸೃಷ್ಟಿಯಾಗಲು ಐಟಿ ಸೆಕ್ಟರ್ ಕಾರಣವಾಗಿದೆ.

ವಿಶ್ವದ ನೂರಾರು ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಪ್ರಮುಖ ಕಚೇರಿಗಳು ಮತ್ತು ಸಂಶೋಧನಾ ಕೇಂದ್ರಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿವೆ. ಇನ್ಫೋಸಿಸ್, ವಿಪ್ರೋದಂತಹ ಭಾರತೀಯ ದಿಗ್ಗಜ ಕಂಪನಿಗಳ ಜೊತೆಗೆ ಗೂಗಲ್, ಮೈಕ್ರೋಸಾಫ್ಟ್, ಅಮೆಜಾನ್ ಮತ್ತು ಆಪಲ್ ನಂತಹ ಜಾಗತಿಕ ದೈತ್ಯ ಸಂಸ್ಥೆಗಳು ಇಲ್ಲಿ ತಮ್ಮ ಕಾರ್ಯಾಚರಣೆ ನಡೆಸುತ್ತಿವೆ.

ಹೀಗಾಗಿ ಎಐ ಆತಂಕವನ್ನು ಐಟಿ ಕ್ಷೇತ್ರ ಜೀರ್ಣಿಸಿಕೊಳ್ಳುತ್ತಿರುವುದು ಅದರ ಪ್ರಬುದ್ಧತೆಯ ದ್ಯೋತಕವಾಗಿದೆ. ಹಾಗಾದರೆ ಇಂಥ ಸಂದರ್ಭದಲ್ಲಿ ಯುವಜನತೆ ಯಾವುದಕ್ಕೆ ಆದ್ಯತೆ ನೀಡಬೇಕು? ಮೊದಲನೆಯದಾಗಿ ತಮ್ಮ ವೃತ್ತಿಪರ ಕೌಶಲವನ್ನು ಹೆಚ್ಚಿಸಿಕೊಳ್ಳಬೇಕು. ಆಗ ಅದುವೇ ಉದ್ಯೋಗಾವಕಾಶವಾಗಿ, ಸ್ವಂತ ಉದ್ದಿಮೆಯ ಸಾಧ್ಯತೆಯಾಗಿ ಬದಲಾಗುತ್ತದೆ.

ಭಾರತದ ಆರು ಪ್ರಮುಖ ಐಟಿ ಕಂಪನಿಗಳು 2026ರ ಏಪ್ರಿಲ್-ಜೂನ್‌ನಲ್ಲಿ 5400 ಉದ್ಯೋಗಿಗಳನ್ನು ನೇಮಿಸಿದೆ. ಇದೇ ಕಂಪನಿಗಳು 2026ರ ಜನವರಿ-ಮಾರ್ಚ್ ಅವಧಿಯಲ್ಲಿ 7100 ಉದ್ಯೋಗಗಳನ್ನು ಕಡಿತಗೊಳಿಸಿದ್ದವು. ಎಐ, ಕ್ಲೌಡ್ ಮತ್ತು ಸೈಬರ್ ಸೆಕ್ಯುರಿಟಿ ವಿಭಾಗದಲ್ಲಿ ಹೆಚ್ಚಿನ ನೇಮಕವಾಗಿದೆ. ಪದವಿಯು ಅರ್ಹತೆಯ ಕನಿಷ್ಠ ಮೆಟ್ಟಿಲಾದರೆ, ಕೌಶಲವೇ ಉದ್ಯೋಗ ಮತ್ತು ಯಶಸ್ಸನ್ನು ಖಾತ್ರಿ ಪಡಿಸುತ್ತಿದೆ.

ಡಿಗ್ರಿ ಯಾವುದೇ ಇರಲಿ, ಅಭ್ಯರ್ಥಿಗೆ ಪ್ರೋಗ್ರಾಮಿಂಗ್ ಭಾಷೆಗಳು ಅಥವಾ ತಾಂತ್ರಿಕ ನೈಪುಣ್ಯ ಇದ್ದರೆ ಸಾಕು, ಐಟಿ ಕಂಪನಿಗಳು ಅವಕಾಶ ನೀಡುತ್ತಿವೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟು, ಜಾಗತಿಕ ಆರ್ಥಿಕತೆಯ ಮಂದಗತಿ, ಕಚ್ಚಾ ತೈಲ ದರ ಏರಿಕೆಯ ಸವಾಲಿನ ಹೊರತಾಗಿಯೂ ಭಾರತದ ಇಕಾನಮಿ ಚೇತರಿಸುತ್ತಿದೆ. ಸೇವಾ ವಲಯದ ಚಟುವಟಿಕೆಗಳು, ಇಂಡಸ್ಟ್ರಿಯಲ್ ಗ್ರೋತ್, ರಫ್ತು, ಬ್ಯಾಂಕ್ ಸಾಲ ವಿಸ್ತರಣೆ ಮತ್ತು ಕೇಂದ್ರ ಸರಕಾರದ ಬಂಡವಾಳ ವೆಚ್ಚ ಇದಕ್ಕೆ ಕಾರಣ ಎಂದು ಇವೈ ಸಂಸ್ಥೆಯ ವರದಿ ತಿಳಿಸಿದೆ.

ಏನಿದು ಕೇಂದ್ರದ ಬಂಡವಾಳ ವೆಚ್ಚ? ಸರಕಾರವು ದೇಶದ ದೀರ್ಘಕಾಲೀನ ಅಭಿವೃದ್ಧಿಗಾಗಿ, ಹೊಸ ಆಸ್ತಿಗಳನ್ನು ಸೃಷ್ಟಿಸಲು ಅಥವಾ ಅಸ್ತಿತ್ವದಲ್ಲಿರುವ ಆಸ್ತಿಗಳನ್ನು ಅಭಿವೃದ್ಧಿಪಡಿಸಲು ಮಾಡುವ ಖರ್ಚು. ಸರಳವಾಗಿ ಹೇಳುವುದಾದರೆ, ಇದು ಕೇವಲ ದಿನನಿತ್ಯದ ಖರ್ಚುಗಳಲ್ಲ (ಉದಾಹರಣೆಗೆ ಸರಕಾರಿ ನೌಕರರ ಸಂಬಳ ಅಥವಾ ಪಿಂಚಣಿ ನೀಡುವ ಖರ್ಚಲ್ಲ). ಬದಲಿಗೆ, ಇದು ದೇಶದ ಮೂಲಭೂತ ಸೌಕರ್ಯಗಳನ್ನು ಬಲಪಡಿಸಲು ಮಾಡುವ ದೀರ್ಘಾವಧಿಯ ಹೂಡಿಕೆಯಾಗಿದೆ.

ಉದಾಹರಣೆಗೆ ಹೊಸ ಹೆದ್ದಾರಿಗಳು, ಎಕ್ ಪ್ರೆಸ್‌ವೇಗಳು ಮತ್ತು ರಾಷ್ಟ್ರೀಯ ರಸ್ತೆಗಳನ್ನು ನಿರ್ಮಿಸುವುದು. ರೈಲ್ವೆ ಹಳಿಗಳ ವಿಸ್ತರಣೆ, ವಂದೇ ಭಾರತ್ ಹೊಸ ರೈಲುಗಳ ಖರೀದಿ ಮತ್ತು ನಿಲ್ದಾಣಗಳ ಆಧುನೀಕರಣ, ಹೊಸ ವಿಮಾನ ನಿಲ್ದಾಣಗಳು ಮತ್ತು ಬಂದರುಗಳ ನಿರ್ಮಾಣ. ಹೊಸ ವಿದ್ಯುತ್ ಉತ್ಪಾದನಾ ಘಟಕಗಳು, ಸೌರಶಕ್ತಿ ಯೋಜನೆಗಳು ಮತ್ತು ಗ್ರೀನ್ ಹೈಡ್ರೋಜನ್ ಕಾರಿಡಾರ್‌ಗಳ ನಿರ್ಮಾಣ.

ಸರಕಾರಿ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಮತ್ತು ಐಐಟಿ , ಐಐಎಂಗಳಂತಹ ಉನ್ನತ ಶಿಕ್ಷಣ ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಬಂಡವಾಳ ವೆಚ್ಚಕ್ಕೆ ಉದಾಹರಣೆಗಳಾಗಿವೆ. ಬಂಡವಾಳ ವೆಚ್ಚ ಯಾಕೆ ಮುಖ್ಯ? ರಸ್ತೆಗಳು ಅಥವಾ ಕಾರ್ಖಾನೆಗಳನ್ನು ನಿರ್ಮಿಸುವಾಗ ಸಿಮೆಂಟ್, ಉಕ್ಕು ಮುಂತಾದ ಕೈಗಾರಿಕೆಗಳು ಬೆಳೆಯುವುದಲ್ಲದೆ, ಲಕ್ಷಾಂತರ ಜನರಿಗೆ ನೇರ ಮತ್ತು ಪರೋಕ್ಷ ಉದ್ಯೋಗಗಳು ಸಿಗುತ್ತವೆ.


ಸರಕಾರವು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದಾಗ, ಖಾಸಗಿ ಕಂಪನಿಗಳು ಕೂಡ ಮುಂದೆ ಬಂದು ದೇಶದಲ್ಲಿ ಹೂಡಿಕೆ ಮಾಡಲು ಅನುಕೂಲವಾಗುತ್ತದೆ. ಇದು ದೇಶದ ಉತ್ಪಾದನಾ ಸಾಮರ್ಥ್ಯವನ್ನು ದೀರ್ಘಕಾಲದವರೆಗೆ ಹೆಚ್ಚಿಸುತ್ತದೆ. ವಿದೇಶಿ ಹೂಡಿಕೆಯನ್ನೂ ಆಕರ್ಷಿಸುತ್ತದೆ. ಐಟಿ ಕ್ಷೇತ್ರದ ಪ್ರಗತಿಗೂ ಸಹಕಾರಿಯಾಗುತ್ತದೆ. ಒಂದಕ್ಕೊಂದು ಎಷ್ಟು ಬಲವಾದ ಸಂಬಂಧ ಇದೆಯಲ್ಲವೇ.

- **ಕೇಶವ** ಪ್ರಸಾದ್ ಬಿ

---

> ಪುರಾಣಗಳಲ್ಲಿ ಜಂಬೂದ್ವೀಪವನ್ನು ಕೇವಲ ಭೌಗೋಳಿಕ ಭೂಮಿಯಾಗಿ ಮಾತ್ರವಲ್ಲದೆ, ಇಡೀ ಖಗೋಳ ವ್ಯವಸ್ಥೆ ಮತ್ತು ಸೂಕ್ಷ್ಮ ಜಗತ್ತಿನ ಸಂಕೇತವಾಗಿ ವಿವರಿಸಲಾಗಿದೆ. ಸಪ್ತ ದ್ವೀಪಗಳು ಮತ್ತು ಸಪ್ತ ಸಮುದ್ರಗಳ ವಿವರಣೆಯು ಭೂಮಿಯ ವಿವಿಧ ಸ್ತರಗಳನ್ನು ಹಾಗೂ ಸೌರಮಂಡಲದ ವಿನ್ಯಾಸವನ್ನು ಪ್ರತಿಬಿಂಬಿಸುತ್ತದೆ.

## ಜಂಬೂ ದ್ವೀಪದ ರಹಸ್ಯ: ಖಗೋಳ ವಿಜ್ಞಾನ, ಕಾಲಚಕ್ರದ ಅರಿವು



ಒಂದೊಳ್ಳೆ ಮಾತು ಪುರಾಣಗಳಲ್ಲಿ ಜಂಬೂ ದ್ವೀಪವನ್ನು ಕೇವಲ ಭೌಗೋಳಿಕ ಭೂಮಿಯಾಗಿ ಮಾತ್ರವಲ್ಲದೆ, ಇಡೀ ಖಗೋಳ ವ್ಯವಸ್ಥೆ ಮತ್ತು ಸೂಕ್ಷ್ಮ ಜಗತ್ತಿನ ಸಂಕೇತವಾಗಿ ವಿವರಿಸಲಾಗಿದೆ. ಸಪ್ತ ದ್ವೀಪಗಳು ಮತ್ತು ಸಪ್ತ ಸಮುದ್ರಗಳ ವಿವರಣೆಯು ಭೂಮಿಯ ವಿವಿಧ ಸ್ತರಗಳನ್ನು ಹಾಗೂ ಸೌರಮಂಡಲದ ವಿನ್ಯಾಸವನ್ನು ಪ್ರತಿಬಿಂಬಿಸುತ್ತದೆ. ಮೇರು ಪರ್ವತವನ್ನು ಬ್ರಹ್ಮಾಂಡದ ಉತ್ತರ ಧ್ರುವ ಅಥವಾ ಆಕ್ಸಿಸ್ ಮುಂಡಿ (ಪ್ರಪಂಚದ ಕೇಂದ್ರ, ಅಕ್ಷ) ಎಂದು ಕಲ್ಪಿಸಲಾಗಿದೆ. ಆಧುನಿಕ ವಿನವು ಭೂಮಿ ಮತ್ತು ಬ್ರಹ್ಮಾಂಡದ ಶಕ್ತಿ ಕೇಂದ್ರಗಳನ್ನು ಹೇಗೆ ಅಭ್ಯಾಸ ಮಾಡುತ್ತಿದೆಯೋ, ಅದನ್ನೇ ನಮ್ಮ ಋಷಿಮುನಿಗಳು ಸಾವಿರಾರು ವರ್ಷಗಳ ಹಿಂದೆಯೇ ಸಂಕೇತಗಳ ಮೂಲಕ ನಮಗೆ ತಲುಪಿಸಿದೆ. ಸನಾತನ ಧರ್ಮದ ಕಾಲ ಗಣನೆ ಜಂಬೂದ್ವೀಪದಲ್ಲಿ ಪ್ರಕೃತಿ ಮತ್ತು ಕಾಲದ ಚಲನೆ ಅತ್ಯಂತ ವ್ಯವಸ್ಥಿತವಾಗಿದೆ. ಸನಾತನ ಪರಂಪರೆಯಲ್ಲಿ ಕಾಲವನ್ನು ಅತ್ಯಂತ ವಿಶಾಲವಾದ ಪ್ರಮಾಣದಲ್ಲಿ ಅಳೆಯಲಾಗುತ್ತದೆ: ಚತುರ್ಯುಗ- 43 ಲಕ್ಷದ 20 ಸಾವಿರ ಮಾನವ ವರ್ಷಗಳು (ಕೃತ, ತ್ರೇತಾ, ದ್ವಾಪರ, ಕಲಿ). ಮನ್ವಂತರ- ಇಂತಹ 71 ಚತುರ್ಯುಗಗಳು ಸೇರಿದರೆ ಒಂದು ಮನ್ವಂತರ. ಕಲ್ಪ- 14 ಮನ್ವಂತರಗಳು ಸೇರಿದರೆ ಬ್ರಹ್ಮನಿಗೆ ಒಂದು ಹಗಲು (43.2 ಕೋಟಿ ವರ್ಷಗಳು).

ಪ್ರಸ್ತುತ ನಾವು ಶ್ವೇತವರಾಹ ಕಲ್ಪದ, ವೈವಸ್ವತ ಮನ್ವಂತರದ, 28ನೇ ಕಲಿಯುಗದಲ್ಲಿ ಜೀವಿಸುತ್ತಿದ್ದೇವೆ. ಪ್ರತಿಯೊಂದು ಪೂಜೆಯ ವೇಳೆಯೂ ಈ ಸಮಯವನ್ನು ನೆನಪಿಸಿಕೊಳ್ಳುವುದು ಸನಾತನ ಸಂಸ್ಕೃತಿಯ ಕಾಲಪ್ರಜ್ಞೆಗೆ ನಿದರ್ಶನವಾಗಿದೆ.

ಪ್ರಕೃತಿ ಮತ್ತು ಮಾನವನ ಅವಿನಾಭಾವ ಸಂಬಂಧ: ವಿಷ್ಣು ಪುರಾಣದಲ್ಲಿರುವ ಜಂಬೂ ದ್ವೀಪದ ಕಥನದಲ್ಲಿ ಪ್ರಕೃತಿಗೆ ಅತ್ಯುನ್ನತ ಸ್ಥಾನ ನೀಡಲಾಗಿದೆ. ಈ ಭೂ ಖಂಡಕ್ಕೆ ಜಂಬೂ (ನೇರಳೆ) ಎಂಬ ವೃಕ್ಷದ ಹೆಸರಿಟ್ಟಿರುವುದು, ನದಿಗಳನ್ನು ದೇವಿಯರೆಂದು ಪೂಜಿಸುವುದು, ಮತ್ತು ಪರ್ವತಗಳನ್ನು ಪವಿತ್ರವೆಂದು ಭಾವಿಸುವುದು- ಇವೆಲ್ಲವೂ ಪ್ರಕೃತಿಯನ್ನು ರಕ್ಷಿಸುವ ಸಂದೇಶವನ್ನು ನೀಡುತ್ತವೆ. ಮನುಷ್ಯ ಪ್ರಕೃತಿಯ ಒಡೆಯನಲ್ಲ, ಬದಲಿಗೆ ಪ್ರಕೃತಿಯ ಒಂದು ಸಣ್ಣ ಭಾಗ ಮಾತ್ರ ಎಂಬುದನ್ನು ಜಂಬೂದ್ವೀಪದ ವಿಸ್ತಾರವು ನಮಗೆ ನೆನಪಿಸುತ್ತದೆ.

ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುವುದು ಸನಾತನ ಧರ್ಮದ ಪ್ರಮುಖ ಕರ್ತವ್ಯಗಳಲ್ಲಿ ಒಂದಾಗಿದೆ. ಪ್ರಾಚೀನ ಕಾಲದಲ್ಲಿದ್ದ ವಸುಧೈವ ಕುಟುಂಬಕಂ(ಇಡೀ ವಿಶ್ವವೇ ಒಂದು ಕುಟುಂಬ) ಎಂಬ ವಿಶಾಲ ಮನೋಭಾವಕ್ಕೆ ಜಂಬೂದ್ವೀಪದ ಕಲ್ಪನೆಯೇ ಆಧಾರ. ಜಗತ್ತಿನ ಸಮಸ್ತ ಜೀವರಾಶಿಗಳು ಒಂದೇ ಬ್ರಹ್ಮಾಂಡದ ಭಾಗ ಎಂಬ ಭಾವನೆ ಇದರಿಂದ ಮೂಡುತ್ತದೆ.

ಭೌತಿಕ ಸುಖಗಳಿಗಿಂತ ಆಧ್ಯಾತ್ಮಿಕ ಶಾಂತಿ ಮತ್ತು ಮೋಕ್ಷವೇ ಅಂತಿಮ ಗುರಿ ಎನ್ನುವ ಅರಿವನ್ನು ಇದು ಮೂಡಿಸುತ್ತಾ ಹೋಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ನಾವು ಮಾಡುವ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳೇ ನಮ್ಮ ಭವಿಷ್ಯವನ್ನು ನಿರ್ಧರಿಸುತ್ತವೆ ಎನ್ನುವ ಕಟು ಸತ್ಯವನ್ನು ನಮಗೆ ಸಾರುತ್ತವೆ. ಇಂತಹ ಮಹತ್ತರ ಸಂದೇಶವನ್ನು ಸಾವಿರಾರು ವರ್ಷಗಳ ಮೊದಲೇ ನಮಗೆ ನಮ್ಮ ಸನಾತನ ಧರ್ಮ ವಿಸ್ತಾರವಾಗಿ ಮನಮುಟ್ಟುವಂತೆ ವಿವರಿಸಿದೆ. ನಮ್ಮ ಪುರಾಣಗಳೆಂದರೆ ಕಟ್ಟು ಕಥೆಗಳಲ್ಲ.

ಆ ಕೃತಿಗಳಲ್ಲಿ ಭೌಗೋಳಿಕ ಜ್ಞಾನ, ಖಗೋಳ ಜ್ಞಾನ, ಕಾಲಗಣನೆ, ಬ್ರಹ್ಮಾಂಡದ ಬಗೆಗಿನ ಅನೇಕ ಕುತೂಹಲಗಳಿಗೆ ಸಮರ್ಪಕವಾದ ಉತ್ತರ ಎಲ್ಲವೂ ದೊರೆಯುತ್ತದೆ. ಆದ್ದರಿಂದಲೇ ನಮ್ಮ ಹಿರಿಯರು ಪಂಚಾಂಗದ ಮೂಲಕ ಕರಾರುವಕ್ಕಾಗಿ ಮಿಥಿಗಳನ್ನು, ವಾರಗಳನ್ನು, ನಕ್ಷತ್ರಗಳನ್ನು ಲೆಕ್ಕ ಹಾಕಿ, ಅನೇಕ ವಿಷಯಗಳನ್ನು ಬರೆಯುತ್ತಾರೆ. ಅಷ್ಟೇ ಅಲ್ಲ ಸೂರ್ಯಗ್ರಹಣ, ಚಂದ್ರ ಗ್ರಹಣ ಇಂತಹ ಸೂಕ್ಷ್ಮ ಖಗೋಳ ಘಟನೆಗಳನ್ನು ಕೂಡ ಒಂದಿಷ್ಟು ತಪ್ಪಿಲ್ಲದಂತೆ ಲೆಕ್ಕ ಹಾಕಲು ನಮ್ಮ ಹಿರಿಯರಿಂದ ಸಾಧ್ಯವಾಗಿದೆ. ಇವೆಲ್ಲವೂ ಜ್ಞಾನದ ದೊಡ್ಡ ಭಂಡಾರ.

ನಮ್ಮ ಪುರಾಣಗಳಲ್ಲಿ ವಿವರಿಸಲಾದ ಜಂಬೂ ದ್ವೀಪವು ಕೇವಲ ಗತಕಾಲದ ಕಥೆಯಲ್ಲ; ಅದು ನಮ್ಮ ವೈದಿಕ ಜ್ಞಾನ, ಸಂಸ್ಕೃತಿ ಮತ್ತು ಬ್ರಹ್ಮಾಂಡದ ವಿಜ್ಞಾನದ ಮಹಾಸಾಗರ. ಈ ಮಹಾನ್ ಪರಂಪರೆಯನ್ನು ಅರ್ಥೈಸಿಕೊಂಡು, ಅದರ ಆಧ್ಯಾತ್ಮಿಕ ಮೌಲ್ಯಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿ ಕೊಳ್ಳುವುದೇ ನಾವು ನಮ್ಮ ಪೂರ್ವಜರಿಗೆ ಮತ್ತು ಈ ಪವಿತ್ರ ಭಾರತ ಭೂಮಿಗೆ ಸಲ್ಲಿಸುವ ನಿಜವಾದ ಗೌರವ. ಓಂ ಶಾಂತಿಃ ಶಾಂತಿಃ ಶಾಂತಿಃ.

- **ರೂಪಾ** ಗುರುರಾಜ್

---

## ಇಂದಿನ ಶಾಲಾ ಶಿಕ್ಷಣದಲ್ಲಿ ಮೌಲ್ಯ ಶಿಕ್ಷಣದ ಅನಿವಾರ್ಯತೆ

ಜ್ಞಾನಕ್ಕಿಂತ ದೊಡ್ಡದು ವ್ಯಕ್ತಿತ್ವ; ವ್ಯಕ್ತಿತ್ವದ ಅಡಿಪಾಯವೇ ಮೌಲ್ಯ ಶಿಕ್ಷಣ.

ಇಂದಿನ ಶಿಕ್ಷಣ ವ್ಯವಸ್ಥೆ ವೇಗವಾಗಿ ಬದಲಾಗುತ್ತಿದೆ. ವಿದ್ಯಾರ್ಥಿಗಳು ವಿಜ್ಞಾನ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (ಎಐ) ಹಾಗೂ ಡಿಜಿಟಲ್ ಜಗತ್ತಿನಲ್ಲಿ ಅಪಾರ ಜ್ಞಾನವನ್ನು ಸಂಪಾದಿಸುತ್ತಿದ್ದಾರೆ. ಆದರೆ ಜ್ಞಾನ ಹೆಚ್ಚಾದಷ್ಟೂ ಮಾನವೀಯ ಮೌಲ್ಯಗಳು ಬೆಳೆಯುತ್ತಿವೆಯೇ ಎಂಬ ಪ್ರಶ್ನೆ ಸಮಾಜದ ಮುಂದೆ ನಿಂತಿದೆ. ಶಾಲಾ ಶಿಕ್ಷಣದ ನಿಜವಾದ ಉದ್ದೇಶ ಕೇವಲ ಪರೀಕ್ಷೆಯಲ್ಲಿ ಅಂಕ ಗಳಿಸುವುದು ಅಥವಾ ಉದ್ಯೋಗ ಪಡೆಯುವುದು ಮಾತ್ರವಲ್ಲ; ಉತ್ತಮ ವ್ಯಕ್ತಿತ್ವ ಹೊಂದಿದ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವುದಾಗಿದೆ. ಈ ಗುರಿಯನ್ನು ಸಾಧಿಸುವ ಪ್ರಮುಖ ಸಾಧನವೇ ಮೌಲ್ಯ ಶಿಕ್ಷಣ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ 202627ನೇ ಶೈಕ್ಷಣಿಕ ವರ್ಷದಿಂದ ಪ್ರಾಥಮಿಕ ಶಾಲೆಗಳ 1ರಿಂದ 10ನೇ ತರಗತಿವರೆಗೆ ಪ್ರತಿದಿನ ಮೌಲ್ಯ ಶಿಕ್ಷಣವನ್ನು ಅನುಷ್ಠಾನಗೊಳಿಸಲು ಸೂಚನೆ ನೀಡಿರುವುದು ಅತ್ಯಂತ ಮಹತ್ವದ ನಿರ್ಧಾರವಾಗಿದೆ. ಪ್ರತಿದಿನ ಶಾಲಾ ಪ್ರಾರ್ಥನೆಯ ನಂತರ ನಿಗದಿತ ಸಮಯದಲ್ಲಿ ಮೌಲ್ಯ ಶಿಕ್ಷಣವನ್ನು ನಡೆಸುವುದು, ಅದರ ದಾಖಲೆಯನ್ನು ನಿರ್ವಹಿಸುವುದು ಹಾಗೂ ವಿದ್ಯಾರ್ಥಿಗಳಲ್ಲಿ ಮೌಲ್ಯಾಧಾರಿತ ಚಟುವಟಿಕೆಗಳನ್ನು ಬೆಳೆಸುವಂತೆ ಶಾಲೆಗಳಿಗೆ ಸೂಚಿಸಲಾಗಿದೆ.

ಇಂದು ಸಮಾಜದಲ್ಲಿ ಹಿಂಸಾಚಾರ, ಮಾದಕ ವ್ಯಸನ, ಸೈಬರ್ ಅಪರಾಧ, ಅಸಹಿಷ್ಣುತೆ, ಹಿರಿಯರ ಗೌರವದ ಕೊರತೆ, ಪರಿಸರ ನಿರ್ಲಕ್ಷ್ಯ ಮತ್ತು ಸಾಮಾಜಿಕ ಜವಾಬ್ದಾರಿಯ ಅಭಾವ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಕ್ಕಳಲ್ಲಿ ಬಾಲ್ಯದಿಂದಲೇ ಉತ್ತಮ ಸಂಸ್ಕಾರ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವುದು ಅತ್ಯಗತ್ಯವಾಗಿದೆ.

ಮೌಲ್ಯ ಶಿಕ್ಷಣವು ಮಕ್ಕಳಿಗೆ ಕೇವಲ ಪಾಠ ಹೇಳುವುದಲ್ಲ; ಜೀವನವನ್ನು ಹೇಗೆ ಬದುಕಬೇಕು ಎಂಬುದನ್ನು ಕಲಿಸುತ್ತದೆ.

ಇಂದು ಅನೇಕ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುತ್ತಾರೆ. ಆದರೆ ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಲು ಆತ್ಮವಿಶ್ವಾಸ, ಸಹನೆ, ಸಂಯಮ ಮತ್ತು ನೈತಿಕತೆ ಅಗತ್ಯ. ಇವು ಪಠ್ಯಪುಸ್ತಕಗಳಿಂದ ಮಾತ್ರ ಬರುವುದು ಸಾಧ್ಯವಿಲ್ಲ, ಶಿಕ್ಷಕರ ನಡವಳಿಕೆ, ಶಾಲೆಯ ವಾತಾವರಣ, ಪ್ರಾರ್ಥನೆ, ಕಥೆಗಳು, ಮಹನೀಯರ ಜೀವನ, ಗುಂಪು ಚಟುವಟಿಕೆಗಳು ಹಾಗೂ ಸಾಮಾಜಿಕ ಸೇವೆಯ ಮೂಲಕವೇ ಈ ಗುಣಗಳು ರೂಪುಗೊಳ್ಳುತ್ತವೆ.

ಮೌಲ್ಯ ಶಿಕ್ಷಣವನ್ನು ಒಂದು ಪ್ರತ್ಯೇಕ ವಿಷಯವೆಂದು ನೋಡದೆ, ಪ್ರತಿಯೊಬ್ಬ ಶಿಕ್ಷಕರು ತಮ್ಮ ಬೋಧನೆಯ ಭಾಗವಾಗಿಸಬೇಕು. ಶಿಕ್ಷಕರು ಹೇಳುವುದಕ್ಕಿಂತ ಅವರು ಹೇಗೆ ಬದುಕುತ್ತಾರೆ ಎಂಬುದೇ ವಿದ್ಯಾರ್ಥಿಗಳ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಆದ್ದರಿಂದ ಶಿಕ್ಷಕರೇ ಮೌಲ್ಯ ಶಿಕ್ಷಣದ ಜೀವಂತ ಮಾದರಿಯಾಗಬೇಕು.

ಮೌಲ್ಯ ಶಿಕ್ಷಣವು ಶಾಲೆಯ ಜವಾಬ್ದಾರಿ ಮಾತ್ರವಲ್ಲ. ಮನೆಯಲ್ಲಿ ಪೋಷಕರು ಮಕ್ಕಳೊಂದಿಗೆ ಕಳೆಯುವ ಸಮಯ, ಹಿರಿಯರಿಗೆ ಗೌರವ, ಸತ್ಯವಂತಿಕೆ, ಸರಳತೆ ಮತ್ತು ಸಾಮಾಜಿಕ ಜವಾಬ್ದಾರಿಯಂತಹ ಮೌಲ್ಯಗಳನ್ನು ತಮ್ಮ ನಡವಳಿಕೆಯ ಮೂಲಕ ಮಕ್ಕಳಿಗೆ ಕಲಿಸಬೇಕು. ಶಾಲೆ ಮತ್ತು ಮನೆ ಒಂದೇ ದಿಕ್ಕಿನಲ್ಲಿ ಕೆಲಸ ಮಾಡಿದಾಗ ಮಾತ್ರ ಉತ್ತಮ ಫಲಿತಾಂಶ ಸಿಗುತ್ತದೆ.

ಕೃತಕ ಬುದ್ಧಿಮತ್ತೆ, ಸಾಮಾಜಿಕ ಜಾಲತಾಣಗಳು ಮತ್ತು ಡಿಜಿಟಲ್ ಜಗತ್ತು ಮಕ್ಕಳ ಬದುಕಿನ ಅವಿಭಾಜ್ಯ ಅಂಗವಾಗಿದೆ.

ತಂತ್ರಜ್ಞಾನವನ್ನು ಹೇಗೆ ಬಳಸಬೇಕು ಎಂಬುದನ್ನು ಕಲಿಸುವುದರ ಜೊತೆಗೆ, ಅದನ್ನು ಜವಾಬ್ದಾರಿಯಿಂದ ಬಳಸುವ ಸಂಸ್ಕಾರವನ್ನು ಬೆಳೆಸುವುದು ಇನ್ನಷ್ಟು ಅಗತ್ಯವಾಗಿದೆ. ಇಲ್ಲದಿದ್ದರೆ ಜ್ಞಾನವು ಸಮಾಜದ ಅಭಿವೃದ್ಧಿಗೆ ಬದಲಾಗಿ ದುರುಪಯೋಗಕ್ಕೂ ಕಾರಣವಾಗಬಹುದು.

ಶಿಕ್ಷಣವು ಕೇವಲ ಉದ್ಯೋಗಕ್ಕಾಗಿ ಅಲ್ಲ, ಉತ್ತಮ ಜೀವನಕ್ಕಾಗಿ ಎಂಬುದನ್ನು ನಾವು ಮರೆಯಬಾರದು. ಮೌಲ್ಯಗಳಿಲ್ಲದ ಶಿಕ್ಷಣವು ದಿಕ್ಕಿಲ್ಲದ ಹಡಗಿನಂತಿದೆ. ಆದ್ದರಿಂದ ಶಾಲೆಗಳಲ್ಲಿ ಮೌಲ್ಯ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಕಾಲದ ಅಗತ್ಯವಾಗಿದೆ.

ಕರ್ನಾಟಕ ಸರ್ಕಾರ ಮೌಲ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದು ಸ್ವಾಗತಾರ್ಹ ಹೆಜ್ಜೆಯಾಗಿದೆ. ಈ ಕಾರ್ಯಕ್ರಮವು ಕೇವಲ ದಾಖಲೆಗಳಿಗೆ ಸೀಮಿತವಾಗದೆ, ಪ್ರತಿಯೊಂದು ಶಾಲೆಯ ದೈನಂದಿನ ಚಟುವಟಿಕೆಯ ಭಾಗವಾದರೆ ಮಾತ್ರ ಅದರ ನಿಜವಾದ ಉದ್ದೇಶ ಈಡೇರುತ್ತದೆ.

ವಿದ್ಯಾರ್ಥಿಯ ಕೈಗೆ ಪುಸ್ತಕ ಕೊಡುವುದು ಶಿಕ್ಷಣ; ಆದರೆ ಅವನ ಹೃದಯದಲ್ಲಿ ಮೌಲ್ಯಗಳನ್ನು ಬಿತ್ತುವುದು ನಿಜವಾದ ಶಿಕ್ಷಣ.

- **ಎಂ.ಆರ್.** ಮಾನ್ವಿ




### ಮೌಲ್ಯ ಶಿಕ್ಷಣದ ಪ್ರಮುಖ ಅಂಶಗಳು

**ಶಾಲೆಯಲ್ಲಿ ಮೌಲ್ಯ ಶಿಕ್ಷಣದ ಮೂಲಕ ವಿದ್ಯಾರ್ಥಿಗಳಲ್ಲಿ ಈ ಗುಣಗಳನ್ನು ಬೆಳೆಸಬಹುದು.**

- ಸತ್ಯನಿಷ್ಠೆ ಮತ್ತು ಪ್ರಾಮಾಣಿಕತೆ
- ಶಿಸ್ತು ಮತ್ತು ಸಮಯ ಪಾಲನೆ
- ಹಿರಿಯರಿಗೆ ಗೌರವ ಹಾಗೂ ಕಿರಿಯರ ಮೇಲೆ ಪ್ರೀತಿ
- ರಾಷ್ಟ್ರಪ್ರೇಮ ಮತ್ತು ಸಂವಿಧಾನದ ಮೌಲ್ಯಗಳ ಅರಿವು
- ಪರಿಸರ ಸಂರಕ್ಷಣೆಯ ಹೊಣೆಗಾರಿಕೆ
- ಸಾಮಾಜಿಕ ಸೇವಾ ಮನೋಭಾವ
- ಸಹಾನುಭೂತಿ ಮತ್ತು ಮಾನವೀಯತೆ
- ಲಿಂಗ ಸಮಾನತೆ ಹಾಗೂ ವೈವಿಧ್ಯತೆಗೆ ಗೌರವ
- ಡಿಜಿಟಲ್ ಜವಾಬ್ದಾರಿ ಮತ್ತು ಸಾಮಾಜಿಕ ಜಾಲತಾಣಗಳ ಸದುಪಯೋಗ
- ಕಾನೂನು ಪಾಲನೆ ಮತ್ತು ನಾಗರಿಕ ಜವಾಬ್ದಾರಿ

---

## ಲ್ಯಾಟಿನ್ ಅಮೆರಿಕ ಮತ್ತು ಸ್ಪ್ಯಾನಿಷ್

> ಲ್ಯಾಟಿನ್ ಅಮೆರಿಕ ಎಂಬ ಹೆಸರು ಬಂದಿರುವುದು ರೋಮನ್ ಸಾಮ್ರಾಜ್ಯದ ಲ್ಯಾಟಿನ್ ಭಾಷೆಯಿಂದ ಹುಟ್ಟಿಕೊಂಡ ರೋಮ್ಯಾ ಭಾಷಾ ಗುಂಪಿನ ಆಧಾರದ ಮೇಲೆಯೇ ಹೊರತು, ಕೇವಲ ಸ್ಪ್ಯಾನಿಷ್ ಭಾಷೆಯ ಆಧಾರದ ಮೇಲಲ್ಲ. ಈ ಪ್ರದೇಶದಲ್ಲಿ ಕೋಟ್ಯಂತರ ಜನರು ಸ್ಪ್ಯಾನಿಷ್ ಹೊರತುಪಡಿಸಿ ಇತರ ಹಲವು ಯುರೋಪಿಯನ್, ಸ್ಥಳೀಯ ಹಾಗೂ ಮಿಶ್ರಿತ ಭಾಷೆಗಳನ್ನು ದೈನಂದಿನ ಜೀವನದಲ್ಲಿ ಬಳಸುತ್ತಾರೆ.

ಸಂಪಾದಕೀಯ ಸದ್ಯಶೋಧನೆ

ಲ್ಯಾಟಿನ್ ಅಮೆರಿಕ ಎಂದ ತಕ್ಷಣವೇ ಬಹುತೇಕರ ಮನಸ್ಸಿನಲ್ಲಿ ಮೂಡುವ ಮೊದಲ ಆಲೋಚನೆ ಸ್ಪ್ಯಾನಿಷ್ ಭಾಷೆ. ವಿಶ್ವದ ಜನಸಂಖ್ಯೆಯ ದೊಡ್ಡ ಭಾಗವು ಲ್ಯಾಟಿನ್ ಅಮೆರಿಕದ ಎಲ್ಲ ದೇಶಗಳಲ್ಲೂ ಸ್ಪ್ಯಾನಿಷ್ ಭಾಷೆಯನ್ನೇ ಪ್ರಮುಖವಾಗಿ ಮಾತನಾಡುತ್ತಾರೆ ಎಂದು ತಪ್ಪಾಗಿ ಭಾವಿಸಿದೆ. ಆದರೆ ವಾಸ್ತವಿಕವಾಗಿ, ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವಿಸ್ತಾರವಾಗಿರುವ ಈ ಪ್ರದೇಶವು ಕೇವಲ ಒಂದೇ ಭಾಷೆಗೆ ಸೀಮಿತವಾಗಿಲ್ಲ.

ಲ್ಯಾಟಿನ್ ಅಮೆರಿಕ ಎಂಬ ಹೆಸರು ಬಂದಿರುವುದು ರೋಮನ್ ಸಾಮ್ರಾಜ್ಯದ ಲ್ಯಾಟಿನ್ ಭಾಷೆಯಿಂದ ಹುಟ್ಟಿಕೊಂಡ ರೋಮ್ಯಾ ಭಾಷಾ ಗುಂಪಿನ ಆಧಾರದ ಮೇಲೆಯೇ ಹೊರತು, ಕೇವಲ ಸ್ಪ್ಯಾನಿಷ್ ಭಾಷೆಯ ಆಧಾರದ ಮೇಲಲ್ಲ. ಈ ಪ್ರದೇಶದಲ್ಲಿ ಕೋಟ್ಯಂತರ ಜನರು ಸ್ಪ್ಯಾನಿಷ್ ಹೊರತುಪಡಿಸಿ ಇತರ ಹಲವು ಯುರೋಪಿಯನ್, ಸ್ಥಳೀಯ ಹಾಗೂ ಮಿಶ್ರಿತ ಭಾಷೆಗಳನ್ನು ದೈನಂದಿನ ಜೀವನದಲ್ಲಿ ಬಳಸುತ್ತಾರೆ.

ಲ್ಯಾಟಿನ್ ಅಮೆರಿಕದಲ್ಲಿ ಸ್ಪ್ಯಾನಿಷ್ ಅಲ್ಲದ ಅತ್ಯಂತ ದೊಡ್ಡ ಭಾಷಿಕ ಉಪಸ್ಥಿತಿ ಎಂದರೆ ಅದು ಪೋರ್ಚುಗೀಸ್. ಇಡೀ ದಕ್ಷಿಣ ಅಮೆರಿಕ ಖಂಡದ ಅರ್ಧದಷ್ಟು ಭೂಭಾಗವನ್ನು ಹೊಂದಿರುವ ಬ್ರೆಜಿಲ್ ದೇಶದ ಅಧಿಕೃತ ಭಾಷೆ ಪೋರ್ಚುಗೀಸ್ ಆಗಿದೆ. ಸುಮಾರು 21 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಬ್ರೆಜಿಲ್‌ನಲ್ಲಿ ಪ್ರತಿಯೊಬ್ಬರೂ ಪೋರ್ಚುಗೀಸ್ ಭಾಷೆಯನ್ನೇ ಮಾತನಾಡುತ್ತಾರೆ. ಅಂದರೆ, ಇಡೀ ಲ್ಯಾಟಿನ್ ಅಮೆರಿಕದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ.30ಕ್ಕೂ ಹೆಚ್ಚು ಜನರು ಸ್ಪ್ಯಾನಿಷ್ ಬದಲಿಗೆ ಪೋರ್ಚುಗೀಸ್ ಭಾಷಿಕರಾಗಿದ್ದಾರೆ.

ಯುರೋಪಿಯನ್ ವಸಾಹತುಶಾಹಿ ಅವಧಿಯಲ್ಲಿ ಪೋರ್ಚುಗಲ್ ಸಾಮ್ರಾಜ್ಯವು ಬ್ರೆಜಿಲ್ ಅನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿದ್ದರ ಪರಿಣಾಮವಾಗಿ, ಇಂದು ಈ ಬೃಹತ್ ರಾಷ್ಟ್ರವು ಸಂಪೂರ್ಣವಾಗಿ ಪೋರ್ಚುಗೀಸ್ ಸಾಂಸ್ಕೃತಿಕ ಹಾಗೂ ಭಾಷಿಕ ಚೌಕಟ್ಟಿನ ಕಾರ್ಯನಿರ್ವಹಿಸುತ್ತಿದೆ. ಸ್ಪ್ಯಾನಿಷ್ ಮತ್ತು ಪೋರ್ಚುಗೀಸ್ ಹೊರತುಪಡಿಸಿದರೆ, ಲ್ಯಾಟಿನ್ ಅಮೆರಿಕದ ವ್ಯಾಪ್ತಿಗೆ ಒಳಪಡುವ ಮತ್ತೊಂದು ಪ್ರಮುಖ ರೋಮ್ಯಾ ಭಾಷೆ ಎಂದರೆ ಫ್ರೆಂಚ್. ಕೆರಿಬಿಯನ್ ದ್ವೀಪ ಸಮೂಹದಲ್ಲಿರುವ ಹೈಟಿ ದೇಶದಲ್ಲಿ ಫ್ರೆಂಚ್ ಮತ್ತು ಹೈಟಿಯನ್ ಕ್ರಿಯೋಲ್ ಅಧಿಕೃತ ಭಾಷೆಗಳಾಗಿವೆ.

ಇದರ ಜತೆಗೆ ದಕ್ಷಿಣ ಅಮೆರಿಕ ಖಂಡದಲ್ಲಿರುವ ಫ್ರೆಂಚ್ ಗಯಾನಾ ಪ್ರದೇಶದಲ್ಲಿಯೂ ಫ್ರೆಂಚ್ ಪ್ರಮುಖ ಭಾಷೆಯಾಗಿದೆ. ಫ್ರೆಂಚ್ ಕೂಡ ಲ್ಯಾಟಿನ್ ಮೂಲದ ಭಾಷೆಯಾಗಿರುವುದರಿಂದ, ಈ ಪ್ರದೇಶಗಳು ಸಾಂಸ್ಕೃತಿಕವಾಗಿ ಲ್ಯಾಟಿನ್ ಅಮೆರಿಕನ್ ಒಕ್ಕೂಟದ ಭಾಗವಾಗಿಯೇ ಗುರುತಿಸಿಕೊಳ್ಳುತ್ತವೆ. ಇದರಿಂದಾಗಿ ಲಕ್ಷಾಂತರ ಜನರು ಫ್ರೆಂಚ್ ಮತ್ತು ಅದರಿಂದ ವಿಕಸನಗೊಂಡ ಸ್ಥಳೀಯ ಭಾಷಾ ರೂಪಗಳನ್ನು ಮಾತನಾಡುತ್ತಾರೆ.



ಯುರೋಪಿಯನ್ನರ ಆಗಮನಕ್ಕೂ ಮುನ್ನವೇ ಈ ಭೂಭಾಗದಲ್ಲಿ ಸಾವಿರಾರು ವರ್ಷಗಳಿಂದ ಜೀವಿಸುತ್ತಿದ್ದ ಅಮೆರಿಕದ ಮೂಲನಿವಾಸಿಗಳ ಭಾಷೆಗಳು ಇಂದಿಗೂ ಅತ್ಯಂತ ಜೀವಂತವಾಗಿವೆ.

ಉದಾಹರಣೆಗೆ, ಪ್ರಾಚೀನ ಇಂಕಾ ಸಾಮ್ರಾಜ್ಯದ ಭಾಷೆಯಾಗಿದ್ದ ಕ್ವೆಚುವಾ ಅನ್ನು ಇಂದು ಪೆರು, ಬೊಲಿವಿಯಾ, ಈಕ್ವೆಡಾರ್ ಮುಂತಾದ ಆಂಡಿಯನ್ ದೇಶಗಳಲ್ಲಿ ಸುಮಾರು 60 ರಿಂದ 80 ಲಕ್ಷಕ್ಕೂ ಹೆಚ್ಚು ಜನರು ಮಾತನಾಡುತ್ತಾರೆ.

ಬೊಲಿವಿಯಾದಲ್ಲಿ ಕ್ವೆಚುವಾ ಮತ್ತು ಐಮಾರ ಭಾಷೆಗಳಿಗೆ ಸ್ಪ್ಯಾನಿಷ್ ಜತೆಗೆ ಅಧಿಕೃತ ರಾಷ್ಟ್ರೀಯ ಭಾಷೆಯ ಸ್ಥಾನಮಾನ ನೀಡಲಾಗಿದೆ. ಈ ಮೂಲನಿವಾಸಿ ಭಾಷೆಗಳು ಕೇವಲ ಗ್ರಾಮೀಣ ಭಾಗಕ್ಕೆ ಸೀಮಿತವಾಗದೇ, ನಗರ ಪ್ರದೇಶಗಳಲ್ಲೂ ದೈನಂದಿನ ಸಂವಹನಕ್ಕೆ ಬಳಕೆಯಾಗುತ್ತಿರುವುದು ಇಲ್ಲಿನ ಭಾಷಿಕ ವೈವಿಧ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ದಕ್ಷಿಣ ಅಮೆರಿಕದ ಮತ್ತೊಂದು ಸ್ವಾರಸ್ಯಕರ ಉದಾಹರಣೆ ಎಂದರೆ ಪರಾಗ್ವೆ ದೇಶ. ಪರಾಗ್ವೆನಲ್ಲಿ ಗೌರಾನಿ ಎಂಬ ಸ್ಥಳೀಯ ಭಾಷೆಯು ದೇಶದ ಶೇ.90ಕ್ಕೂ ಹೆಚ್ಚು ಜನರಿಗೆ ತಿಳಿದಿದೆ. ಜಗತ್ತಿನ ಮೂಲ ನಿವಾಸಿಗಳ ಭಾಷೆಯೊಂದನ್ನು ಬುಡಕಟ್ಟು ರಹಿತ ಸಾಮಾನ್ಯ ಜನಸಂಖ್ಯೆಯೂ ಬೃಹತ್ ಪ್ರಮಾಣದಲ್ಲಿ ಮಾತನಾಡುವ ಅಪರೂಪದ ಉದಾಹರಣೆ ಪರಾಗ್ವೆ. ಇಲ್ಲಿನ ಸರಕಾರಿ ಆಡಳಿತ, ಶಿಕ್ಷಣ, ಮಾಧ್ಯಮ ಮತ್ತು ದೈನಂದಿನ ವ್ಯವಹಾರಗಳಲ್ಲಿ ಗೌರಾನಿ ಭಾಷೆಯನ್ನು ಸ್ಪ್ಯಾನಿಷ್‌ನಷ್ಟೇ ಸಮಾನವಾಗಿ ಬಳಸಲಾಗುತ್ತದೆ. ಹೀಗಾಗಿ, ಒಬ್ಬ ಪರಾಗ್ವೆ ಪ್ರಜೆ ತಾಯ್ನುಡಿಯಾಗಿ ಗೌರಾನಿಯನ್ನು ಮಾತನಾಡುವುದು ಅಲ್ಲಿ ತೀರಾ ಸಾಮಾನ್ಯ ಸಂಗತಿಯಾಗಿದೆ.

- **ವಿಶ್ವೇಶ್ವರ** ಭಟ್

# ನಾಳೆ ಕಾನ್ಸ್‌ಟೇಬಲ್ ನೇಮಕಾತಿಗೆ ಪರೀಕ್ಷೆ

• ಪ್ರಜೋದಯ ವರದಿ

**ಹಾಸನ:** ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿಗಾಗಿ ಜಿಲ್ಲೆಯಲ್ಲಿ ಆಗಸ್ಟ್ 2 ರಂದು ನಡೆಯುವ ಪರೀಕ್ಷೆಯನ್ನು ಯಾವುದೇ ಗೊಂದಲಕ್ಕೆ ಆಸ್ಪದವಿಲ್ಲ ದಂತೆ, ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಪರೀಕ್ಷಾ ಸಿದ್ಧತೆ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅಭ್ಯರ್ಥಿಗಳ ಡ್ರೆಸ್ ಪರಿಶೀಲನೆಗಾಗಿ ಪ್ರತಿ ಪರೀಕ್ಷಾ ಕೇಂದ್ರಕ್ಕೆ ಡ್ರೆಸ್ ಕೋಡ್ ಆಫಿಸರ್‌ಗಳನ್ನು ನೇಮಿಸಲು ಸೂಚಿಸಿದರಲ್ಲದೆ, ಸಮಯಕ್ಕೆ ಸರಿಯಾಗಿ ಪ್ರಶ್ನೆ ಪತ್ರಿಕೆಗಳು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಬೇಕು. ಸಾಗಾಣಿಕೆ ಸಂದರ್ಭದಲ್ಲಿ ಎಚ್ಚರ ವಹಿಸಬೇಕು. ಪ್ರತಿ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ.ಟಿ.ವಿ.ಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ, ಜಾಮರ್ ಸರಿಯಿದೆಯಾ, ಮೂಲಭೂತ ಸೌಕರ್ಯಗಳನ್ನು ಪರಿಶೀಲನೆ ಮಾಡುವಂತೆ ಸೂಚನೆ ನೀಡಿದರು.

ಅಭ್ಯರ್ಥಿಗಳಿಗೆ ನಿಗದಿತ ಸಮಯದಲ್ಲಿ ಪ್ರಶ್ನೆ ಪತ್ರಿಕೆಯನ್ನು ವಿತರಣೆ ಮಾಡಬೇಕು. ಈ ನಿಟ್ಟಿನಲ್ಲಿ ಇನ್ವಿಜಿಲೇಟರ್‌ಗಳಿಗೆ ಸೂಕ್ತ ತರಬೇತಿ ನೀಡಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಗುರುತಿನ ಕಾರ್ಡ್ ನೀಡಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಯಾರು ಕೂಡ ಮೊಬೈಲ್ ಬಳಸುವಂತಿಲ್ಲ. ಅಭ್ಯರ್ಥಿಗಳು ತುಂಬು ತೋಳಿನ ಶರ್ಟ್ ಧರಿಸಿ ಹಾಜರಾಗಬಾರದು ಹಾಗು ಯಾವುದೇ ರೀತಿಯ ಆಭರಣಗಳನ್ನು ಧರಿಸಿ (ಮಂಗಳ ಸೂತ್ರ ಕಾಲುಂಗುರ ಹೊರತು ಪಡಿಸಿ) ಪರೀಕ್ಷೆಗೆ ಹಾಜರಾಗುವಂತಿಲ್ಲ. ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸುವ ಮೊದಲು ಅಭ್ಯರ್ಥಿಗಳನ್ನು ಕಟ್ಟುನಿಟ್ಟಾದ ಮತ್ತು ಕಡ್ಡಾಯ ಭದ್ರತಾ ತಪಾಸಣೆಗೆ ಒಳಪಡಿಸಲಾಗುತ್ತದೆ. ಇದರ ಜೊತೆಗೆ, ಸಿಸಿಟಿವಿ ಕಣ್ಗಾವಲು ಮತ್ತು ಆಧಾರಿತ ಮುಖ ಚಹರೆ ಗುರುತಿಸುವಿಕೆ ಸೇರಿದಂತೆ ಬಹು ಗುರುತಿನ ಪರಿಶೀಲನಾ ಪ್ರಕ್ರಿಯೆಗಳನ್ನು ನಡೆಸಲಾಗುತ್ತದೆ. ಯಾವುದೇ ಸಂದರ್ಭದಲ್ಲೂ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ನಿಷೇಧಿತ ವಸ್ತುಗಳು, ಸಾಧನಗಳನ್ನು ಕೊಂಡೊಯ್ಯಲು ಅನುಮತಿ ಇರುವುದಿಲ್ಲ.

ಪಠ್ಯ ಸಾಮಗ್ರಿಗಳು, ಚೀಟಿಗಳು ಜಾಮಿಟ್ರಿ ಬಾಕ್ಸ್, ಪೆನ್ಸಿಲ್ ಬಾಕ್ಸ್, ಪ್ಲಾಸ್ಟಿಕ್ ಪೌಚ್, ಕ್ಯಾಲ್ಕುಲೇಟರ್, ಸ್ಕೇಲ್, ಬರೆಯುವ ಪೇಪರ್, ಪೇನ್‌ಡ್ರೈವ್‌ಗಳು, ಎರೇಸರ್, ಲಾಗ್ ಟೇಬಲ್, ಎಲೆಕ್ಟ್ರಾನಿಕ್ ಪೆನ್, ಸ್ಕ್ಯಾನರ್, ಆಧುನಿಕ ಸಂವಹನ ಸಾಧನಗಳಾದ ಮೊಬೈಲ್ ಫೋನ್, ಬ್ಲೂಟೂತ್, ಇಯರ್ ಫೋನ್‌ಗಳು, ಮೈಕ್ರೋಫೋನ್, ಪೇಜರ್, ಇತ್ಯಾದಿ ಯಾವುದೇ ಆಧುನಿಕ ಸಂವಹನ ಸಾಧನಗಳನ್ನು ನಿಷೇಧಿಸಿದೆ ಎಂದು ತಿಳಿಸಿದರು.

ಯಾವುದಾದರೂ ಧಾರ್ಮಿಕ ಉಡುಪುಗಳನ್ನು ಧರಿಸಿಕೊಂಡು ಪರೀಕ್ಷೆ ಬರೆಯಲು ಇಚ್ಚಿಸುವವರು ಪರೀಕ್ಷೆ ಆರಂಭಕ್ಕೆ 2 ಗಂಟೆ ಮೊದಲು ಪರೀಕ್ಷಾ ಕೇಂದ್ರಕ್ಕೆ ವರದಿ ಮಾಡಿಕೊಳ್ಳಬೇಕು. ಅವರನ್ನು ಪ್ರತ್ಯೇಕವಾಗಿ ಪರಿಶೀಲನೆಗೆ ಒಳಪಡಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು ಎಂದರು.

ಇತ್ತೀಚೆಗೆ ಬಸ್, ರೈಲು ಇತ್ಯಾದಿ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ನಿಗದಿತ ಸಮಯಕ್ಕಿಂತ ಎರಡು ಗಂಟೆ ಮೊದಲು ಪರೀಕ್ಷಾ ಕೇಂದ್ರವನ್ನು ತಲುಪಲು ಅಭ್ಯರ್ಥಿಗಳು ಹೆಚ್ಚಿನ ಮುನ್ನೆಚ್ಚರಿಕೆಯಿಂದ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಸೂಕ್ತ ಎಂದು ತಿಳಿಸಿದರು.

ವಿವಿಧ ಸಮಯಗಳಲ್ಲಿ ಬಾರಿಸುವ ಎಚ್ಚರಿಕೆ ಗಂಟೆಗಳ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಚುರಪಡಿಸಿರುವ ಬೆಲ್ ಸಮಯವನ್ನು ನೋಡಿಕೊಳ್ಳಬೇಕು. ಮೂರನೆಯ ಬೆಲ್ ಆದ ನಂತರ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸಲು ಅನುಮತಿ ನೀಡಲಾಗುವುದಿಲ್ಲ. ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನ್ನು ಮಾತ್ರ ಉಪಯೋಗಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಹಾಗೂ ವಿವಿಧ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

## ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ

• ಪ್ರಜೋದಯ ವರದಿ

ಹಾಸನ: ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಕಾನ್‌ಸ್ಟೇಬಲ್ (ಸಿವಿಲ್) ಹುದ್ದೆಗಳ ನೇರ ನೇಮಕಾತಿ ಸಂಬಂಧ ಆ.2 ರಂದು ಲಿಖಿತ ಪರೀಕ್ಷೆ ನಡೆಯುತ್ತಿದ್ದು, ಜಿಲ್ಲಾ ವ್ಯಾಪ್ತಿಯ 32 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪರೀಕ್ಷೆ ನಡೆಯುವ ದಿನ ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿನ ಜೆರಾಕ್ಸ್, ಸೈಬರ್, ಕಂಪ್ಯೂಟರ್ ಅಂಗಡಿಗಳನ್ನು ಮುಚ್ಚುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಆದೇಶಿಸಿದ್ದಾರೆ.

ಆದೇಶವನ್ನು ಪರೀಕ್ಷಾರ್ಥಿಗಳು ಮತ್ತು ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು, ಸಿಬ್ಬಂದಿಗಳು ಹೊರತುಪಡಿಸಿ ಇತರರು ನಿಷೇಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಎಂದು ನಿರ್ಬಂಧಿಸಲಾಗಿದೆ.



ಹಾರನಹಳ್ಳಿ ಸಮೀಪದ ತಳಲೂರು ಗ್ರಾಮದ ಗ್ರಾಮ ದೇವತೆ ಹಾಗೂ ಅರಸೀಕೆರೆ ತಾಲ್ಲೂಕಿನ ಶಕ್ತಿ ದೇವತೆ ಶ್ರೀಬನ್ನಿ ಮಹಾಕಾಳಿ ಅಮ್ಮನವರಿಗೆ ಆಷಾಡ ಮಾಸದ ಮೂರನೆಯ ಶುಕ್ರವಾರದ ಅಂಗವಾಗಿ ಮಹಾ ಪೂಜೆಗೂ ಮೊದಲು ವಿಶೇಷ ಬಣ್ಣ- ಬಣ್ಣದ ಹೂವುಗಳಿಂದ ಮಾಡಿದ್ದ ಅಲಂಕಾರದಲ್ಲಿ ದೇವಿ ಅದ್ಭುತವಾಗಿ ಕಂಗೊಳಿಸುತ್ತಿರುವುದು. ದೂರದ ಊರುಗಳಿಂದ ನೂರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪುನೀತರಾದರು.

# ಒತ್ತುವರಿ ರಸ್ತೆ ತೆರವುಗೊಳಿಸಲು ಆಗ್ರಹಿಸಿ ಪ್ರತಿಭಟನೆ

## ಒತ್ತುವರಿ ವಿರುದ್ಧ ಅಗಸರಹಟ್ಟಿ ಗ್ರಾಮಸ್ಥರ ಆಕ್ರೋಶ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಭರತವಳ್ಳಿ ಗ್ರಾಮ ಪಂಚಾಯತಿ ಅಗಸರಹಟ್ಟಿ ಗ್ರಾಮದಲ್ಲಿ ಒತ್ತುವರಿಯಾಗಿರುವ ತಿರುಗಾಡುವ ರಸ್ತೆಯನ್ನು ಕೂಡಲೇ ಬಿಡಿಸಿಕೊಡಬೇಕೆಂದು ಒತ್ತಾಯಿಸಿ ಅಗಸರಹಟ್ಟಿ ಗ್ರಾಮಸ್ಥರು ಶುಕ್ರವಾರ ಪಟ್ಟಣದ ಮಿನಿ ವಿದಾನಸೌಧ ಪ್ರತಿಭಟನೆ ನಡೆಸಿದರು.

ಗ್ರಾಮಸ್ಥ ಕಾಂತರಾಜು ಅವರು ಮಾತನಾಡಿ, ಮಾವನೂರಿನಿಂದ ಅಗಸರಹಟ್ಟಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸರ್ವೆ ನಂಬರ್ 25 ರ ಮಣ್ಣಿನ ರಸ್ತೆ ಜಾಗವನ್ನು ಕೆಲ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದರಿಂದ ವಾಹನಗಳು, ಜಾನುವಾರುಗಳು ಹಾಗೂ ಜನಸಾಮಾನ್ಯರು ಓಡಾಡದಂತೆ ಕಿರುಕುಳ ನೀಡುತ್ತಿದ್ದಾರೆ ಎಂದು ದೂರಿದರು.



ಈ ರಸ್ತೆಯು ನಮ್ಮ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದ್ದು, ಈ ರಸ್ತೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ವ್ಯಕ್ತಿಗಳಿಂದ ತೆರವುಗೊಳಿಸಿಕೊಡಬೇಕು. ಒತ್ತುವರಿ ಮಾಡಿಕೊಂಡ ವ್ಯಕ್ತಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ತಹಸೀಲ್ದಾರ್ ಅವರಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ. ಹತ್ತಾರು ಬಾರಿ ಕಚೇರಿಗೆ ಅಲೆದು ಬೇಸತ್ತು ನಾವು ಪ್ರತಿಭಟನೆಯ ದಾರಿ ಹಿಡಿದಿದ್ದೇವೆ ಎಂದು ಪ್ರತಿಭಟನಾಕಾರರು ದೂರಿದರು.

ತಕ್ಷಣ ಸಂಬಂಧಪಟ್ಟವರು ಇತ್ತ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳದೆ ಹೋದರೆ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಉಗ್ರ ಹೋರಾಟ ನಡೆಸುವುದಾಗಿ ಅವರು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಮುಖಂಡ ಶಾಂತಕೃಷ್ಣ, ಛಲವಾದಿ ಮಹಾಸಭಾದ ಗೌರವಾಧ್ಯಕ್ಷ ಎ.ಟಿ.ಮಲ್ಲೇಶ್ ಪ್ರತಿಭಟನಾ ಕಾರರನ್ನುದ್ದೇಶಿಸಿ ಮಾತನಾಡಿದರರು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ವೆಂಕಟರಾಮೇಗೌಡ, ಜಯಣ್ಣ, ಪುಟ್ಟಸ್ವಾಮಿ, ನಾಗರಾಜು, ತಿಮ್ಮೇಗೌಡ, ಗುರುಸ್ವಾಮಿ, ದಿನೇಶ್, ಕಾಂತರಾಜು, ಜಗದೀಶ್, ಹೊನ್ನೇಗೌಡ, ಯೋಗೇಶ್, ವೆಂಕಟೇಗೌಡ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

# ರಾಜ್ಯಮಟ್ಟದ ಹ್ಯಾಕಥಾನ್ ಯಶಸ್ವಿ




• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ಎಂಜಿನಿಯರಿಂಗ್ ಕಾಲೇಜಿನ ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್ (ಟಿಬಿಐ) ಹಾಗೂ ಎಂಇ-ರೈಸ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ 24 ಗಂಟೆಗಳ ರಾಜ್ಯಮಟ್ಟದ ಆರೋಗ್ಯ ಕ್ಷೇತ್ರದ ನವೋದ್ಯಮ ಹ್ಯಾಕಥಾನ್ ಆರೋಗ್ಯ ಮಂಥನ-2026 ಯಶಸ್ವಿಯಾಗಿ ನಡೆಯಿತು.

ಹ್ಯಾಕಥಾನ್‌ನಲ್ಲಿ 288 ವಿದ್ಯಾರ್ಥಿಗಳು 68 ತಂಡಗಳಾಗಿ ಭಾಗವಹಿಸಿದ್ದರು. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ನವೀನ ಪರಿಹಾರಗಳನ್ನು ರೂಪಿಸುವ ಉದ್ದೇಶದಿಂದ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ ವಿಜೇತರಿಗೆ ಒಟ್ಟು 1 ಲಕ್ಷ ರೂ. ಮೊತ್ತದ ನಗದು ಬಹುಮಾನ ಹಾಗೂ ಸ್ಟಾರ್ಟ್ ಅಪ್ ಮತ್ತು ಇನ್‌ಕ್ಯುಬೇಷನ್ ಅವಕಾಶಗಳನ್ನು ಕಲ್ಪಿಸಲಾಗಿತ್ತು.

ಹಿಮ್ಸ್‌ನ ನಿರ್ದೇಶಕ ಡಾ.ಬಿ.ರಾಜಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಡಾ.ತೇಜಸ್ವಿ, ಡಾ.ಪ್ರವೀಣ್, ಡಾ.ನಿರುಪಮಾ, ಡಾ.ಸಂಧ್ಯಾ, ಡಾ.ರಶ್ಮಿ, ಡಾ.ರಘು, ಡಾ.ಸಾವಿತ್ರಿ ಹಾಗೂ ಡಾ. ಸುನೀತಾ ಅವರು ಭಾಗವಹಿಸಿದ್ದ ತಂಡಗಳಿಗೆ ಮಾರ್ಗದರ್ಶನ ನೀಡಿದರು.

ಸ್ಪರ್ಧೆಯಲ್ಲಿ ಮಲೆನಾಡು ಎಂಜಿನಿಯರಿಂಗ್ ಕಾಲೇಜಿನ ಎಂ.ರಶ್ಮಿ ನೇತೃತ್ವದ ತಂಡ ಪ್ರಥಮ, ರೇವಾ ವಿಶ್ವವಿದ್ಯಾಲಯದ ಕೆ.ಧ್ರುವ ನೇತೃತ್ವದ ತಂಡ ದ್ವಿತೀಯ ಹಾಗೂ ಕೆನರಾ ಎಂಜಿನಿಯರಿಂಗ್ ಕಾಲೇಜಿನ ದೇವಿಶ್ರೀ ನೇತೃತ್ವದ ತಂಡ ತೃತೀಯ ಸ್ಥಾನ ಪಡೆದವು. ಏಳು ತಂಡಗಳಿಗೆ ವಿಶೇಷ ಪ್ರಶಂಸನಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಬಿ.ಆರ್.ಗುರುದೇವ್, ಕಾರ್ಯದರ್ಶಿ ಜಿ.ಟಿ. ಕುಮಾರ್, ಪ್ರಾಂಶುಪಾಲ ಡಾ.ಎಸ್.ಪ್ರದೀಪ್, ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯ ನಿರ್ದೇಶಕರಾದ ಡಾ.ಡಿ.ಸಿ.ಅರವಿಂದ್, ಜಿ.ಆರ್. ಶ್ರೀನಿವಾಸ್, ಆರೋಗ್ಯ ಮಂಥನ ಹ್ಯಾಕಥಾನ್ ಸಂಯೋಜಕಿ ಡಾ. ಗೀತಾ ಕಿರಣ್, ಎನ್.ಜಿ. ಕಿರಣ್, ಅಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಹಾಸನ

ಜಿಲ್ಲಾ ಪಂಚಾಯತ್, ಬಿ.ಎಂ.ರಸ್ತೆ, ಹಾಸನ-573201

ದೂರವಾಣಿ ಸಂಖ್ಯೆ: 08172-268794 ಜಾಲ ತಾಣ: https://zphassan.karnataka.gov.in Mail ID: admsection95@gmail.com

ಸಂ:ಜಿಪಂಹಾ/ಅಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/2026-27

ದಿನಾಂಕ:28.07.2026

ಮರು ಟೆಂಡರ್ ಅಧಿಸೂಚನೆ

ಹಾಸನ ಜಿಲ್ಲಾ ಪಂಚಾಯತ ಕಛೇರಿಯಲ್ಲಿ ವಿವಿಧ ಶಾಖೆಗಳ ದೈನಂದಿನ ಕೆಲಸಗಳಿಗೆ ಅಗತ್ಯವಿರುವ ಲೇಖನ ಮತ್ತು ಸ್ವಚ್ಛತಾ ಸಾಮಗ್ರಿಗಳ ಸರಬರಾಜಿಗಾಗಿ ಮರು ಟೆಂಡರ್ ಪ್ರಕಟಣೆ, ಮರು ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಜಿಪಂಹಾ/ಆಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/2026-27 ದಿನಾಂಕ: 28.07.2026 ಮರು ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ 01.08.2026 ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ 15.00.000/- ಮರು ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 15.08.2026 KPPP ಪೋರ್ಟಲ್ ನಲ್ಲಿ ಸಂಜೆ 5.00 ರವರೆಗೆ ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ, ದಿನಾಂಕ: 17.08.2026 ಬೆಳಗ್ಗೆ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಆರ್ಥಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: ದಿನಾಂಕ: 24.08.2026 ಮದ್ಯಾಹ್ನ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ. (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಮರು ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ 37,500/- ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಉಪ ಕಾರ್ಯದರ್ಶಿ (ಆಡಳಿತ) ಜಿಲ್ಲಾ ಪಂಚಾಯತ್, ಹಾಸನ ದೂರವಾಣಿ ಸಂಖ್ಯೆ: 08172-268824 ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು, KPPP ಪೋರ್ಟಲ್‌ನಲ್ಲಿ ಪಡೆಯಬಹುದು.

ಸಹಿ/-ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಹಾಸನ.

ವಾಸಾಸಂಇ/ಹಿಸನಿ/ಹಾಸನ/379/ಕೆಎಸ್‌ಎಂಸಿಎ/2026-27



ಅರಕಲಗೂಡು ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ಘನ ನ್ಯಾಯಾಲಯದಲ್ಲಿ

ಸಿಆರ್.ಮಿಸ್. 680/ 2026

ಅರ್ಜಿದಾರರು:

1. ಶಾಂತಕುಮಾರ ಬಿನ್ ನಿಂಗೇಗೌಡ ಸುಮಾರು 57 ವರ್ಷ, ದುಮ್ಮಿಕೊಪ್ಪಲು ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
2. ಕಮಲಮ್ಮ ಕೋಂ ರಂಗೇಗೌಡ ಸುಮಾರು 60 ವರ್ಷ, ಜೋಡಿಗುಬ್ಬಿ ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.
3. ಭಾರತಿ ಕೋಂ ಮಂಜೇಗೌಡ ಸುಮಾರು 55 ವರ್ಷ, ಕೆರಗೋಡು ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ವಿರುದ್ಧ

ರೆಸ್ಪಾಂಡೆಂಟರು: ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ ಅರ್ಜಿದಾರರುಗಳ ತಾತನಾದ ಗಂಗೇಗೌಡ ಬಿನ್ ಚಿಕ್ಕಬಸವೇಗೌಡರವರು ದಿನಾಂಕ:08-03-1972ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ದುಮ್ಮಿ ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ5-09-2026ರಂದು ಪೂರ್ವಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ -ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು

ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಜುಲೈ ತಿಂಗಳಿನ 24ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ದಿನಾಂಕ: 24-07-2026

ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಅರಕಲಗೂಡು



ಅರಕಲಗೂಡು ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ಘನ ನ್ಯಾಯಾಲಯದಲ್ಲಿ

ಸಿಆರ್.ಮಿಸ್. 679/ 2026

ಅರ್ಜಿದಾರರು:

1. ಶಾಂತಕುಮಾರ ಬಿನ್ ನಿಂಗೇಗೌಡ ಸುಮಾರು 57 ವರ್ಷ, ದುಮ್ಮಿಕೊಪ್ಪಲು ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
2. ಕಮಲಮ್ಮ ಕೋಂ ರಂಗೇಗೌಡ ಸುಮಾರು 60 ವರ್ಷ, ಜೋಡಿಗುಬ್ಬಿ ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.
3. ಭಾರತಿ ಕೋಂ ಮಂಜೇಗೌಡ ಸುಮಾರು 55 ವರ್ಷ, ಕೆರಗೋಡು ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ವಿರುದ್ಧ

ರೆಸ್ಪಾಂಡೆಂಟರು: ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ ಅರ್ಜಿದಾರರುಗಳ ಮುತ್ತಜ್ಜಿಯಾದ ಲಕ್ಷ್ಮಮ್ಮ ಕೋಂ ಚಿಕ್ಕಬಸವೇಗೌಡರವರು ದಿನಾಂಕ:08-03-1968 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ದುಮ್ಮಿ ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 5-09-2026 ರಂದು ಪೂರ್ವಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದಲ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಜುಲೈ ತಿಂಗಳಿನ 24 ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ದಿನಾಂಕ: 24-07-2026

ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಅರಕಲಗೂಡು


# ಇಂದು ವ್ಯಸನ ಮುಕ್ತ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಹಾಸನ ಇವರ ಸಹಯೋಗದಲ್ಲಿ ಆ.1 ರಂದು ಬೆಳಿಗ್ಗೆ 11 ಗಂಟೆಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಶ್ರೀ ಮ.ನಿ.ಪ್ರ ಡಾ.ಮಹಾಂತ ಶಿವ ಯೋಗಿಗಳ ಜನ್ಮ ದಿನಾರಚರಣೆ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಬೃಹತ್ ಬೆಂಗಳೂರು ಅಭಿವೃದ್ಧಿ ಸಚಿವರು ಹಾಗೂ ಹಾಸನ ಜಿಲ್ಲಾ ಪ್ರಕೃತಿ ವಿಕೋಪಗಳ ನಿರ್ವಹಣೆಯ ಮೇಲುಸ್ತುವಾರಿ ಸಚಿವ ಕೃಷ್ಣಭೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಹೆಚ್.ಡಿ. ರೇವಣ್ಣ, ಸಿ.ಎನ್ ಬಾಲಕೃಷ್ಣ, ಎ.ಮಂಜು, ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು ಅವರು ಭಾಗವಹಿಸಲಿದ್ದಾರೆ.

ಹಿಮ್ಸ್ ಮನೋ ವೈದ್ಯಕೀಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ|| ಭಾರತಿ ಅವರು ಉಪನ್ಯಾಸ ನೀಡಲಿದ್ದಾರೆ.

# ಜನರಲ್ ಕೆ.ಎಸ್.ತಿಮ್ಮಯ್ಯ ನಗದು ಪ್ರಶಸ್ತಿಗೆ ಹೆಸರು ನೋಂದಣಿ

• ಪ್ರಜೋದಯ ವರದಿ

**ಹಾಸನ:** ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಹಾಸನ ಇವರ ವತಿಯಿಂದ 2025-26ನೇ ಸಾಲಿನಲ್ಲಿ ನಡೆದ ಸಾರ್ವತ್ರಿಕ ಪರೀಕ್ಷೆಯಲ್ಲಿ ಗರಿಷ್ಟ ಅಂಕಗಳನ್ನು ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ ಜನರಲ್ ಕೆ.ಎಸ್.ತಿಮ್ಮಯ್ಯ ನಗದು ಪ್ರಶಸ್ತಿ ನೀಡಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿ ಜಿಲ್ಲೆಯ ಎಸ್.ಎಸ್.ಎಲ್.ಸಿ ಯಲ್ಲಿ ಗರಿಷ್ಟ ಅಂಕ ಪಡೆದ ಇಬ್ಬರು ಹಾಗೂ ದ್ವಿತೀಯ ಪಿ.ಯು.ಸಿ. ಯಲ್ಲಿ ಗರಿಷ್ಟ ಅಂಕ ಪಡೆದ ಒಬ್ಬ ವಿದ್ಯಾರ್ಥಿಗಳು ಈ ಪ್ರಶಸ್ತಿಯನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಪ್ರಶಸ್ತಿಯನ್ನು ಪಡೆಯಲು ಶೇ.60 ಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದ ಮಾಜಿ ಸೈನಿಕರ ಮಕ್ಕಳು, ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಹಾಸನ ಕಾರ್ಯಾಲಯದಲ್ಲಿ ಅ.31 ರೊಳಗೆ ಅರ್ಹ ಅಭ್ಯರ್ಥಿಗಳು ಹೆಸರನ್ನು ನೊಂದಾಯಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ ಎಂದು ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

HASSAN INSTITUTE OF MEDICAL SCIENCES, HASSAN (An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN Website: www.hims-hassan.org

Phone/Fax No.08172-231699, 231599, Email:directorhims@yahoo.com

ಸಂಖ್ಯೆ:HIMS/EST/WIF/01/2026-27 ದಿನಾಂಕ:27.07.2026.

ನೇರ ಸಂದರ್ಶನ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರು -17 ಹುದ್ದೆಗಳನ್ನು ಖಾಯಂ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅರ್ಜಿಗಳನ್ನು ಸಂಬಂಧಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಸ್ವತ: ದೃಢೀಕರಿಸಿ ದಿನಾಂಕ:10.08.2026 ರ ಸಂಜೆ 05 ಗಂಟೆಯೊಳಗಾಗಿ ಕೊಠಡಿ ಸಂಖ್ಯೆ:120 ಹಿಮ್ಸ್, ಹಾಸನ ಇಲ್ಲಿಗೆ ಸಲ್ಲಿಸಲು ಸೂಚಿಸಿದೆ. ಅರ್ಜಿಗಳು ಅಪೂರ್ಣವಾಗಿದ್ದರೆ ಅಂತಹ ಅರ್ಜಿಗಳನ್ನು ರದ್ದುಗೊಳಿಸಲಾಗುವುದು. ಹಾಗೂ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಮೂಲ ದಾಖಲಾತಿಗಳೊಂದಿಗೆ ನೇರ ಸಂದರ್ಶನದ ದಿನದಂದು ಹಾಜರಾಗುವಂತೆ ಸೂಚಿಸಿದೆ.

•Classification of reservation for the post of Assistant Professors:

Assistant Professor

| SL. NO | Department | Total No of posts | Local Cadre (Kalyana Karnataka) - 02 | Residual Parent Cadre – 15 posts |
|---|---|---|---|---|
| 1 | Pathology | 1 | SC-(Oth), | Cat-II(A) - Female Candidate |
| 2 | General Medicine | 3 | GM-Oth) | G.M – Others |
| 3 | Paediatrics | 2 | | Cat-I- PH |
| 4 | General Surgery | 2 | | GM – Ex. Ser, |
| 5 | OBG | 1 | | SC-Rural |
| 6 | Ophthalmology | 1 | | GM-Others |
| 7 | Orthopaedics | 3 | | Cat- III(B)-PH |
| 8 | Anaesthesia | 2 | | GM.- Female Candidate, |
| 9 | Radiology | 1 | | Cat- II(A)- Rural |
| 10 | Radiotherapy | 1 | | GM.- Rural |
| | | | | Cat-II (B)-PH, |
| | | | | GM-PH |
| | | | | SC -KM |
| | | | | GM- Female Candidate |
| | | | | Cat- II(A)- KM |
| | Total | 17 | 02 | 15 |

ಅರ್ಜಿ ನಮೂನೆ, ಮೀಸಲಾತಿ, ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಅಂತರ್ಜಾಲ www.himshassan.karnataka.gov.in ಇಲ್ಲಿ ಸಂಪರ್ಕಿಸಿ.

ಸಹಿ/-ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/364/ಕೆಎಸ್‌ಎಂಸಿಎ/2026-27



ಅರಕಲಗೂಡು ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ಘನ ನ್ಯಾಯಾಲಯದಲ್ಲಿ

ಸಿಆರ್.ಮಿಸ್. 681/ 2026

ಅರ್ಜಿದಾರರು:

1. ಶಾಂತಕುಮಾರ ಬಿನ್ ನಿಂಗೇಗೌಡ ಸುಮಾರು 57 ವರ್ಷ, ದುಮ್ಮಿಕೊಪ್ಪಲು ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
2. ಕಮಲಮ್ಮ ಕೋಂ ರಂಗೇಗೌಡ ಸುಮಾರು 60 ವರ್ಷ, ಜೋಡಿಗುಬ್ಬಿ ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.
3. ಭಾರತಿ ಕೋಂ ಮಂಜೇಗೌಡ ಸುಮಾರು 55 ವರ್ಷ, ಕೆರಗೋಡು ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ವಿರುದ್ಧ

ರೆಸ್ಪಾಂಡೆಂಟರು: ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ ಅರ್ಜಿದಾರರುಗಳ ಅಜ್ಜಿಯಾದ ನಂಜಮ್ಮ ಕೋಂ ಗಂಗೇಗೌಡ ರವರು ದಿನಾಂಕ:06-04-1981 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ದುಮ್ಮಿ ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 05-09-2026ರಂದು ಪೂರ್ವಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು ಇದಕ್ಕೆ ತಪ್ಪಿದ್ದರೆ ಸದಲ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಜುಲೈ ತಿಂಗಳಿನ 24 ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ದಿನಾಂಕ: 24-07-2026

ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಅರಕಲಗೂಡು



ಅರಕಲಗೂಡು ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ಘನ ನ್ಯಾಯಾಲಯದಲ್ಲಿ

ಸಿಆರ್.ಮಿಸ್. 682/ 2026

ಅರ್ಜಿದಾರರು:

1. ಶಾಂತಕುಮಾರ ಬಿನ್ ನಿಂಗೇಗೌಡ ಸುಮಾರು 57 ವರ್ಷ, ದುಮ್ಮಿಕೊಪ್ಪಲು ಗ್ರಾಮ, ದೊಡ್ಡಮಗ್ಗೆ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
2. ಕಮಲಮ್ಮ ಕೋಂ ರಂಗೇಗೌಡ ಸುಮಾರು 60 ವರ್ಷ, ಜೋಡಿಗುಬ್ಬಿ ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.
3. ಭಾರತಿ ಕೋಂ ಮಂಜೇಗೌಡ ಸುಮಾರು 55 ವರ್ಷ, ಕೆರಗೋಡು ಗ್ರಾಮ, ಹಳ್ಳಿಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ವಿರುದ್ಧ

ರೆಸ್ಪಾಂಡೆಂಟರು: ತಹಶೀಲ್ದಾರ್ ರವರು ಹಾಗೂ ಜನನ-ಮರಣ ನೋಂದಾಣಾಧಿಕಾರಿಗಳು ತಾಲ್ಲೂಕು ಕಚೇರಿ ಅರಕಲಗೂಡು. ಅರಕಲಗೂಡು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿಯ ಅರ್ಜಿದಾರರುಗಳ ಮುತ್ತಾತನಾದ ಚಿಕ್ಕಬಸವೇಗೌಡ ಬಿನ್ ಬಸವೇಗೌಡರವರು ದಿನಾಂಕ:02-05-1985 ರಂದು ಅರಕಲಗೂಡು ತಾಲ್ಲೂಕು, ದೊಡ್ಡಮಗ್ಗೆ ಹೋಬಳಿ, ದುಮ್ಮಿ ಗ್ರಾಮದಲ್ಲಿನ ಅರ್ಜಿದಾರರ ಮನೆಯಲ್ಲಿ ಮೃತರಾಗಿರುತ್ತಾರೆ. ಮೃತರ ಮರಣ ದೃಢೀಕರಣ ಪತ್ರದ ಅವಶ್ಯಕತೆ ಇದ್ದು, ಅದನ್ನು ಪಡೆಯುವ ಆದೇಶಕ್ಕಾಗಿ, ಅರ್ಜಿದಾರರುಗಳು ಘನ ನ್ಯಾಯಾಲಯದಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಿದ್ದು ಸದರಿ ಅರ್ಜಿದಾರರು ಸಲ್ಲಿಸಿರುವ ಮೃತರ ಮರಣ ದಿನಾಂಕದ ಬಗ್ಗೆ ಯಾರಿಂದಲಾದರೂ ಆಕ್ಷೇಪಣೆಗಳು ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ 05/09/2026 ರಂದು ಪೂರ್ವಹ್ನ 11 ಗಂಟೆಗೆ ನೀವುಗಳು ಹಾಜರಾಗಿ ನೀವಾಗಲೀ ಅಥವಾ ನಿಮ್ಮ ವಕೀಲರುಗಳ ಮೂಲಕವಾಗಲೀ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆಂದು

ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷಿಯವಾಗಿ ವಿಚಾರಣೆ ಮಾಡಲಾಗುವುದೆಂದು ಈ ಮೂಲಕ 2026 ನೇ ವರ್ಷದ ಜುಲೈ ತಿಂಗಳಿನ 24ರ ದಿನಾಂಕದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು (ನಾಗರಾಜ ಎಂ.ಎಸ್.) ದಿನಾಂಕ: 24-07-2026

ನ್ಯಾಯಾಲಯದ ಅಪ್ಪಣೆ ಮೇರೆಗೆ ಶಿರಸ್ತೇದಾರರು ಅರಕಲಗೂಡು ಸಿವಿಲ್ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಅರಕಲಗೂಡು

## ಶ್ರೀಲಂಕಾ ಸರಣಿಗೆ ಬೂಮ್ರಾ ಫಿಟ್

• ಪ್ರಜೋದಯ ವರದಿ

**ನವದೆಹಲಿ:** ಗಾಯದ ಸಮಸ್ಯೆಯಿಂದ ಬಳಲುತ್ತಿದ್ದ ಭಾರತ ಕ್ರಿಕೆಟ್ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಚೇತರಿಸಿಕೊಂಡಿದ್ದು, ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರ ದಲ್ಲಿ ನಡೆದ ಫಿಟ್‌ನೆಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಮೂಲಕ ಮುಂದಿನ ತಿಂಗಳು ಶ್ರೀಲಂಕಾ ವಿರುದ್ಧ ನಡೆಯಲಿರುವ 2 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಅವರು ಕಣಕ್ಕಿಳಿಯುವುದು ಖಚಿತವಾಗಿದೆ.

ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಯ ವೇಳೆ ಬೂಮ್ರಾ ಅವರು ಗಾಯ ಗೊಂಡಿದ್ದರು. ಹಾಗಾಗಿ, ಲಾರ್ಡ್ಸ್‌ನಲ್ಲಿ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಅವರು ಆಡಿರಲಿಲ್ಲ. ದೈಹಿಕ ಕ್ಷಮತೆಗೆ ಒಳಪಟ್ಟು ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿಗೆ ಆಯ್ಕೆ ಮಾಡಲಾಗಿತ್ತು.

ಜಸ್‌ಪ್ರೀತ್ ಬೂಮ್ರಾ ಅವರು ಗಾಯದಿಂದ ಚೇತರಿಸಿಕೊಂಡಿದ್ದಾರೆ. ಸಿಒಇ ಫಿಟ್‌ನೆಸ್ ಪರೀಕ್ಷೆಯಲ್ಲಿ ಕೂಡ ಅವರುಉತ್ತೀರ್ಣರಾಗಿದ್ದಾರೆ. ಹಾಗಾಗಿ, ಶ್ರೀಲಂಕಾ ವಿರುದ್ಧದ ಎರಡು ಟೆಸ್ಟ್ ಗಳಲ್ಲಿ ಅವರು ಕಣಕ್ಕಿಳಿಯುವ ಸಾಧ್ಯತೆಯಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ತಜ್ಞರು, ವಿಪಕ್ಷಗಳ ಸಲಹೆ ಬಳಿಕ ತೀರ್ಮಾನ: ಸಿಎಂ

## ಕಾವೇರಿ ಸಮಸ್ಯೆಗೆ ಕರ್ನಾಟಕ ಬಂದ್ ಪರಿಹಾರವಲ್ಲ | ರಾಜ್ಯದ ಹಿತ ಕಾಯಲು ಸರ್ಕಾರ ಬದ್ಧ

• ಪ್ರಜೋದಯ ವರದಿ



**ಬೆಂಗಳೂರು:** ಕಾವೇರಿ ನೀರಿನ ವಿಚಾರವಾಗಿ ಕಾನೂನು ತಜ್ಞರ ಸಲಹೆ ಹಾಗು ವಿರೋಧ ಪಕ್ಷಗಳ ನಾಯಕರನ್ನು ವಿಶ್ವಾಸಕ್ಕೆ ಪಡೆದು ತೀರ್ಮಾನ ಮಾಡಲಾಗುವುದೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿತ್ಯ 3,500 ಕ್ಯೂಸೆಕ್ ನೀರನ್ನು ತಮಿಳು ನಾಡಿಗೆ ಹರಿಸಬೇಕೆಂಬ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ ನೀಡಿದೆ. ಈ ಹಿಂದೆ ಇಂತಹ ಸಂಕಷ್ಟದ ಕಾಲದಲ್ಲಿ ಅನೇಕ ತೀರ್ಮಾನ ಬಂದಿವೆ. 2016, 2017, 2018, 2023ರಲ್ಲಿ ಇಂತಹ ಆದೇಶ ಬಂದಿವೆ. ಕಳೆದ ವರ್ಷ 177 ಟಿಎಂಸಿ ಬದಲಾಗಿ 400ಕ್ಕೂ ಹೆಚ್ಚು ಟಿಎಂಸಿ ನೀರು ಹರಿಸಲಾಗಿತ್ತು. ಅನೇಕ ಪ್ರಮಾಣದ ನೀರು ಸಮುದ್ರವನ್ನು ಸೇರಿದೆ ಎಂದು ತಿಳಿಸಿದರು.

ಬಿಳಿಗುಂಡ್ಲುವಿಗೆ 3,500ಕ್ಯೂಸೆಕ್ ನೀರನ್ನು ಹರಿಸಲು ನೀಡಿರುವ ಆದೇಶದ ವಿರುದ್ಧ ನಾವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದೇವು. ನಮ್ಮ ವಿರೋಧ ಪಕ್ಷಗಳ ಸ್ನೇಹಿತರು, ಅಧಿಕಾರಿಗಳು ಹೋಗಿಲ್ಲ ಎಂದು ಆರೋಪ ಮಾಡಿದರು. ನಾನು ಅವರಿಗೆ ಉತ್ತರ ಕೊಡುವ ಅಗತ್ಯವಿಲ್ಲ. ರಾಜ್ಯದ ಜನರಿಗೆ ಮಾಹಿತಿ ನೀಡುವುದು ನನ್ನ ಜವಾಬ್ದಾರಿಯಾ ಗಿದೆ. ಸಿಡಬ್ಲ್ಯೂಎಂಎ ಮುಂದೆ ಮೇಲ್ಮನವಿ ಸಲ್ಲಿಸಿದ್ದೇವು. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಳಿ ಇದ್ದ ಸಲಹೆಗಾರರನ್ನೇ ನಾವು ಮುಂದುವರಿಸಿ ದ್ದೇವೆ ಎಂದರು.

**ನಮ್ಮ ಕರ್ತವ್ಯಕ್ಕೆ ಬದ್ಧರಾಗಿದ್ದೇವೆ**

ಹಾರಂಗಿ ಶೇ.95, ಕಬಿನಿ ಶೇ.83, ಕೆಆರ್‌ಎಸ್ ಶೇ.36, ಹೇಮಾವತಿ ಜಲಾಶಯದಲ್ಲಿ ಶೇ. 67ರಷ್ಟು ನೀರು ಶೇಖರಣೆಯಾಗಿದೆ. ಈ ಮಾಹಿತಿಯನ್ನು ಯಾರಿಂದಲೂ ಮುಚ್ಚಿಡಲು ಸಾಧ್ಯವಿಲ್ಲ. ಪ್ರತಿನಿತ್ಯ 3,500 ಕ್ಯೂಸೆಕ್‌ನಂತೆ 15 ದಿನಕ್ಕೆ 4.5 ಟಿಎಂಸಿ ನೀರು ಹರಿಸಲು ಆದೇಶ ನೀಡಲಾಗಿದೆ. ರಾಜ್ಯದಲ್ಲಿ ಒಳಹರಿವು ಚೇತರಿಕೆ ಕಂಡಿರುವುದು ಸಮಾಧಾನಕರ ವಿಚಾರ. ನಮ್ಮ ಅಣೆಕಟ್ಟುಗಳ ಒಳಹರಿವು 25 ಸಾವಿರ ಕ್ಯೂಸೆಕ್ ನಷ್ಟಿದ್ದು, ಅದರಲ್ಲಿ 3,500 ಕ್ಯೂಸೆಕ್ ನೀರು ಹರಿಸಲು ಸೂಚಿಸಿದ್ದಾರೆ. ಈ ಮಾಹಿತಿಗಳನ್ನು ಸಮಿತಿ ಹಾಗು ಪ್ರಾಧಿಕಾರ ಎರಡೂ ತನ್ನ ಆದೇಶ ದಲ್ಲಿ ಸೂಚಿಸಿವೆ. ಆದರೂ ನಮ್ಮ ರಾಜ್ಯದ ರೈತರ ಹಿತ ಕಾಪಾ ಡುವುದು ಸರ್ಕಾರದ ಕರ್ತವ್ಯ. ನಾವು ನಮ್ಮ ರಾಜ್ಯದ ರೈತರ ರಕ್ಷಣೆ ಮಾಡುತ್ತೇವೆ. ನಾವು ಶಾಸಕರನ್ನು ಕರೆದು ಕುಡಿಯುವ ನೀರು ಹಾಗು ಕೆರೆಗಳನ್ನು ತುಂಬಿಸುವ ರಕ್ಷಣೆ ನೀಡಿದ್ದೇವೆ. ಬಂಗಾರಪ್ಪನವರ ಕಾಲದಿಂದ ಇಲ್ಲಿಯವರೆಗೂ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗೆಲ್ಲ ನಾವು ರಾಜ್ಯದ ಹಿತಕ್ಕೆ ಅಗತ್ಯ ರಕ್ಷಣೆ ನೀಡಲು ಬದ್ಧತೆ ತೋರಿದ್ದೇವೆ. ಈಗಲೂ ನಾವು ನಮ್ಮ ಕರ್ತವ್ಯಕ್ಕೆ ಬದ್ಧರಾಗಿದ್ದೇವೆ ಎಂದರು.

**ಕೇಂದ್ರ ಸಚಿವರು, ಸಂಸದರಿಂದ ಸಹಕಾರ**

ವಿರೋಧ ಪಕ್ಷದ ನಾಯಕರು ಮಾಧ್ಯಮಗಳ ಮೂಲಕ ಅನೇಕ ಮಾರ್ಗದರ್ಶನ ನೀಡಿದ್ದಾರೆ. ನಾವು ಮೇಲ್ಮನವಿ ಸಲ್ಲಿಸುವ ಮುನ್ನ ಕೇಂದ್ರ ಸಂಸದರು ಹಾಗು ಕೇಂದ್ರ ಸಚಿವರ ಸರ್ವಪಕ್ಷ ಸಭೆ ಮಾಡಿದ್ದೆ. ಎಲ್ಲಾ ಪಕ್ಷದ ಸಂಸದರು ಬಹಳ ಗೌರವದಿಂದ ರಾಜ್ಯದ ನೆಲ, ಜಲ ವಿಚಾರದಲ್ಲಿ ಸಭೆಯಲ್ಲಿ ಭಾಗವಹಿಸಿ ಚರ್ಚೆ ಮಾಡಿದ್ದಾರೆ. 3 ಕೇಂದ್ರ ಸಚಿವರು ಸೇರಿ 36 ಸಂಸದರು ಭಾಗವಹಿಸಿದ್ದರು. ನಾನು ಪ್ರಹ್ಲಾದ್ ಜೋಷಿ ಹಾಗೂ ಸಂಸದರ ಜೊತೆ ಚರ್ಚೆ ಮಾಡಿದ್ದೆ. ನಮ್ಮ ಮೇಲ್ಮನವಿ ಅರ್ಜಿಯನ್ನು ನಾವು ಜೋಷಿ, ಸೋಮಣ್ಣ ಹಾಗು ಶೋಭ ಕರಂದ್ಲಾಜೆ ಅವರಿಗೆ ಕಳುಹಿಸಿಕೊಟ್ಟಿದ್ದೆ. ಅವರು ಕೂಡ ತಮ್ಮ ಪ್ರಯತ್ನ ಮಾಡಿದ್ದಾರೆ. ಅವರು ಕೇಂದ್ರ ಸಚಿವರ ಮೇಲೆ ಒತ್ತಡ ಹಾಕಿದ್ದಾರೆ ಎಂದರು.

**ಪರಿಸ್ಥಿತಿ ತಿಳಿಯಾದ ಬಳಿಕ ಮಾತುಕತೆ**

ಆ.3ರಂದು ತಮಿಳನಾಡು ಮುಖ್ಯಮಂತ್ರಿ ವಿಜಯ್ ಅವರು ಬೆಂಗಳೂರಿಗೆ ಬರುವ ತೀರ್ಮಾನವಾಗಿತ್ತು. ಈ ಹಿಂದೆ ನಾನೇ ತಮಿಳುನಾಡಿಗೆ ಹೋಗಲು ಮನವಿ ಮಾಡಿದ್ದೆ. ಆದರೆ, ಡಿಎಂಕೆ ಸರ್ಕಾರ ಅನುಮತಿ ನೀಡಿರಲಿಲ್ಲ, ನಂತರ ಚುನಾವಣೆ ಬಂದು ಸರ್ಕಾರ ಬದಲಾಗಿದೆ. ಈಗ ವಿಜಯ್ ಅವರು ತಮ್ಮ ತಂಡದೊಂದಿಗೆ ಬರುವುದಾಗಿ ತಿಳಿಸಿದ್ದಾರೆ. ಈ ವಿಚಾರವನ್ನು ಸೌಹಾರ್ದತೆ ಮೂಲಕ ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು. ಸಮಸ್ಯೆ ಬಗೆಹರಿದರೆ ಅವರಿಗೂ ಹಿತ, ನಮಗೂ ಹಿತ. ಈಗ ಪರಿಸ್ಥಿತಿ ಉತ್ತಮವಾಗಿಲ್ಲ, ಹೀಗಾಗಿ ಸಭೆಯನ್ನು ಕೆಲ ದಿನಗಳ ಕಾಲ ಮುಂದೂಡೋಣ ವೆಂದು ನಾನು ತಮಿಳುನಾಡು ಮುಖ್ಯಮಂತ್ರಿ ಅವರಿಗೆ ಮನವಿ ಮಾಡುತ್ತೇನೆ ಎಂದರು.

## ವ್ಯಾಪಾರಿಗಳಿಗೆ ತೆರವು ತೊಂದರೆ: ಕೇಂದ್ರ ಸಚಿವರಿಗೆ ಮನವಿ



• ಪ್ರಜೋದಯ ವರದಿ

**ಹಾಸನ:** ಫುಟ್‌ಪಾತ್ ಒತ್ತುವರಿ ತೆರವು ಹೆಸರಿನಲ್ಲಿ ಮಹಾನಗರ ಪಾಲಿಕೆ ಅಧಿಕಾರಿಗಳು ಬೀದಿ ಬದಿ ವ್ಯಾಪಾರಗಳಿಗೆ ಭಾರೀ ತೊಂದರೆ ನೀಡುತ್ತಿದ್ದು, ನ್ಯಾಯ ದೊರಕಿಸಿಕೊಡ ಬೇಕೆಂದು ವ್ಯಾಪಾರಿಗಳು ಶಾಸಕ ಹೆಚ್.ಪಿ. ಸ್ವರೂಪ್ ನೇತೃತ್ವದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಕೇಂದ್ರ ಸಚಿವರನ್ನು ಭೇಟಿಯಾದ ಅವರು, ತಾಲ್ಲೂಕು ಪಂಚಾಯಿತಿ, ಶಿಕ್ಷಣ ಇಲಾಖೆಯ ಕಚೇರಿ ಮಧ್ಯದ ರಸ್ತೆಯ ಎರಡೂ ಬದಿಗೆ ಹಲವು ವರ್ಷಗಳಿಂದ ಲಘು ಉಪಹಾರ ಕ್ಯಾಂಟೀನ್‌ಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಮಹಾನಗರ ಪಾಲಿಕೆ ಅಧಿಕಾರಿಗಳು ಇತ್ತೀಚೆಗೆ ತೆರವುಗೊಳಿಸಿದ್ದಾರೆ. ಕ್ಯಾಂಟೀನ್‌ಗಳು ಮುಖ್ಯರಸ್ತೆಯಲ್ಲಿ ಅಲ್ಲದೆ ಗಲ್ಲಿ ರಸ್ತೆಯ ಬದಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಜೀವನೋಪಾಯಕ್ಕಾಗಿ ಇದ್ದ ಉದ್ಯಮವನ್ನು ಕಿತ್ತುಕೊಳ್ಳಲಾಗಿದೆ. ತೆರವು ಕ್ರಮದಿಂದ ಬದುಕು ಸಂಕಷ್ಟಕ್ಕೆ ಸಿಲುಕಿದೆ ಎಂದು ಅವಲತ್ತುಕೊಂಡರು.

ಜಿಲ್ಲೆಯ ವಿವಿಧ ಸರ್ಕಾರಿ ಕಚೇರಿಗಳಿಗೆ ಪ್ರತಿದಿನ ನೂರಾರು ರೈತರು, ಗ್ರಾಮೀಣ ಭಾಗದ ಜನರು ವಿವಿಧ ಕೆಲಸಗಳ ನಿಮಿತ್ತ ಆಗಮಿಸುತ್ತಾರೆ. ಅವರಿಗೆ ಕಡಿಮೆ ದರದಲ್ಲಿ ಉಪಾಹಾರ ಮತ್ತು ಊಟ ದೊರೆಯುತ್ತಿದ್ದ ಕ್ಯಾಂಟೀನ್‌ಗಳನ್ನು ತೆರವುಗೊಳಿಸಿರುವುದರಿಂದ ಬಡವರು ತೊಂದರೆ ಅನುಭವಿಸುವಂತಾಗಿದೆ ಎಂದು ವ್ಯಾಪಾರಿಗಳು ವಿವರಿಸಿದರು.

ಈ ಕುರಿತು ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿದಾಗ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಸಂಬಂಧಪಟ್ಟ ಸ್ಥಳವನ್ನು ಪರಿಶೀಲಿಸಿ, ಕಾನೂನುಬದ್ಧವಾಗಿ ಕ್ಯಾಂಟೀನ್‌ಗಳನ್ನು ನಡೆಸಲು ಅವಕಾಶ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಬೇಕೆಂದರು.

ಬೀದಿಬದಿ ವ್ಯಾಪಾರಿಗಳಾದ ಉಳುವಾರೆ ಹರೀಶ್, ನಂಜುಂಡಿ, ಯಶುಪಾಲ್, ವೆಂಕಟೇಶ್, ರಂಗಸ್ವಾಮಿ, ಸಾದೀಕ್, ಅಶೋಕ್, ರಿಹಾನ್, ನಾಗರಾಜು ಮೊದಲಾದವರಿದ್ದರು.

## ಇಂದು ಭಾವನಾ ಬೆಳಗೆರೆ ಜೊತೆ ಪತ್ರಕರ್ತರ ಸಂವಾದ




• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿ ವತಿಯಿಂದ ಆ. 1ರ ಶನಿವಾರ ಬೆಳಿಗ್ಗೆ 10.30ಕ್ಕೆ ಪ್ರಕಾಶಕಿ ಹಾಗು ಪತ್ರಕರ್ತೆ ಭಾವನಾ ಬೆಳಗೆರೆ ಅವರೊಂದಿಗೆ ತಿಂಗಳ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿ ಸಂಚಾಲಕ ಪ್ರಸನ್ನಕುಮಾರ್ ಹಾಡ್ಲಹಳ್ಳಿ (ಚಲಂ) ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸಾಂಸ್ಕೃತಿಕ ಸಮಿತಿಯ ಸ್ಟಡಿ ವಿಥ್ ಸೊಸೈಟಿ ಹೆಸರಿನಡಿ ನಡೆಸುತ್ತಿರುವ ಏಳನೇ ಕಾರ್ಯಕ್ರಮ ಇದಾಗಿದೆ. ಪತ್ರಿಕೋದ್ಯಮದಲ್ಲಿ ಮಾಲೀಕತ್ವ ಹಾಗು ಪತ್ರಕರ್ತರ ಜವಾಬ್ದಾರಿ ಕುರಿತು ಭಾವನಾ ಬೆಳಗೆರೆ ಮಾತನಾಡಲಿದ್ದು, ರವಿ ಬೆಳಗೆರೆ ಅವರ ಪತ್ರಿಕೋದ್ಯಮ ಜೀವನ ಕುರಿತು ಮಾತನಾಡುವರು. ಪತ್ರಕರ್ತರು ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮ ಉಪಯುಕ್ತವಾಗಲಿದೆ ಎಂದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ. ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಲಿದ್ದು, ರಾಜ್ಯ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರು ಉಪಸ್ಥಿತಿ ವಹಿಸಲಿ ದ್ದಾರೆ. ಸಂಘದ ಎಲ್ಲಾ ಪದಾಧಿಕಾರಿಗಳು, ಪತ್ರಕರ್ತರು, ಸಂಪಾದಕರು, ಉಪ ಸಂಪಾದಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕೋರಿದರು.

ಸಾಂಸ್ಕೃತಿಕ ಸಮಿತಿ ವತಿಯಿಂದ ನಡೆಸಿರುವ ಆರು ಕಾರ್ಯಕ್ರಮಗಳು ಯಶಸ್ವಿಯಾಗಿವೆ. ರಾಜ್ಯದಲ್ಲೇ ಮೊದಲ ಬಾರಿಗೆ ಹಾಸನ ಪತ್ರಕರ್ತರ ಸಂಘ ನೂತನ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದೆ. ನೋಟೆಡ್ ನ್ಯೂಸ್ ಎಂಬ ಪರಿಕಲ್ಪನೆಯಡಿ ಪತ್ರಿಕೆಗಳಲ್ಲಿ ಪ್ರಕಟವಾಗುವ ವಿಶೇಷ ವರದಿಗಳನ್ನು ಬಿತ್ತರಿಸುವ ಮೂಲಕ ಹೊಸ ಸಂಪ್ರದಾಯಕ್ಕೆ ಮುನ್ನುಡಿ ಬರೆಯಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಹರೀಶ್, ಸಾಂಸ್ಕೃತಿಕ ಸಮಿತಿ ಪದಾಧಿಕಾರಿಗಳಾದ ಸಿ.ಆರ್.ನವೀನ್, ಪ್ರಕಾಶ್, ಮಲ್ಲಿಕಾರ್ಜುನ ಕೊಚ್ಚರಗಿ, ಮೋಹನ್ ಕಣತೂರು ಇದ್ದರು.

## ಬ್ರಿಲಿಯಂಟ್ ಕಾಲೇಜಿನಲ್ಲಿ ಗುರುವಂದನೆ | ನಿರ್ಮಲಾನಂದನಾಥ ಶ್ರೀ ಕಿವಿಮಾತು

# ಅಂಕ ಗಳಿಕೆಯೊಂದೇ ಶಿಕ್ಷಣದ ಅಂತಿಮ ಗುರಿಯಲ್ಲ

• ಪ್ರಜೋದಯ ವರದಿ




**ಹಾಸನ:** ಸನ್ನಡತೆ, ಶ್ರಮ ಮತ್ತು ಉತ್ತಮ ಗುರಿಯತ್ತ ಸಾಗುವ ಮನೋಭಾವವೇ ಜೀವನವನ್ನು ಯಶಸ್ಸಿನತ್ತ ಕೊಂಡೊಯ್ಯುತ್ತದೆ. ಶಿಕ್ಷಣವೆಂದರೆ ಕೇವಲ ಅಂಕಗಳಿಸುವ ಸಾಧನವಲ್ಲವೆಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಅವರು ಹೇಳಿದರು.

ಹಾಸನಾಂಬ ಕಲಾ ಕ್ಷೇತ್ರದಲ್ಲಿ ಶ್ರೀರಂಗ ಶಿಕ್ಷಣ ಸಂಸ್ಥೆ ಹಾಗು ಬ್ರಿಲಿಯಂಟ್ ಪದವಿ ಪೂರ್ವ ಕಾಲೇಜು ವತಿಯಿಂದ ಶುಕ್ರವಾರ ಆಯೋಜಿಸಿದ್ದ ಗುರುವಂದನೆ ಮತ್ತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದ ಅವರು, ಪ್ರತಿಯೊಂದು ಜೀವಿಯಲ್ಲೂ ಪ್ರಜ್ಞೆ ಅಡಗಿದ್ದು, ಸರಿಯಾದ ದಿಕ್ಕಿನಲ್ಲಿ ಬೆಳೆಸಿಕೊಳ್ಳುವುದು ಅತ್ಯಗತ್ಯ. ಜ್ಞಾನ ಹೆಚ್ಚಾದಂತೆ ಬೆಳಕು ದೊರೆಯುತ್ತದೆ. ಆದರೆ, ಅದೇ ಜ್ಞಾನವನ್ನು ತಪ್ಪು ದಿಕ್ಕಿನಲ್ಲಿ ಬಳಸಿದರೆ ಅನಾಹುತ ಉಂಟಾಗಬಹುದು. ಆದ್ದರಿಂದ ಶಿಕ್ಷಣದ ಅವಧಿಯಲ್ಲಿಯೇ ಉತ್ತಮ ಚಿಂತನೆ, ಶಿಸ್ತು ಮತ್ತು ಜೀವನದ ಗುರಿ ಬಗ್ಗೆ ಸ್ಪಷ್ಟತೆ ಹೊಂದಬೇಕೆಂದರು.

ವಿದ್ಯಾರ್ಥಿಗಳ ಜೀವನದಲ್ಲಿ ಅನೇಕ ಆಮಿಷ ಎದುರಾಗುತ್ತವೆ. ಅವುಗಳಿಗೆ ಮಾರು ಹೋಗದೆ, ತಮ್ಮ ದೃಷ್ಟಿಯನ್ನು ಗುರಿಯತ್ತ ಕೇಂದ್ರೀಕರಿಸಬೇಕು. ಬುದ್ಧಿವಂತಿಕೆ ಮಾತ್ರ ಸಾಕಾಗುವುದಿಲ್ಲ, ನಿರಂತರ ಶ್ರಮ, ಜವಾಬ್ದಾರಿ ಇದ್ದಾಗ ಮಾತ್ರ ಅಂದುಕೊಂಡದ್ದನ್ನು ಸಾಧಿಸಲು ಸಾಧ್ಯವಾಗುತ್ತದೆಂದರು.

ಪ್ರೀತಿ ಎಂಬುದು ಆರೋಗ್ಯಕರ ಸಂಬಂಧ ಬೆಳೆಸುವ ಶಕ್ತಿಯಾಗಬೇಕು. ಅದು ಜೀವನ ಹಾಳು ಮಾಡಬಾರದು. ಪ್ರಜ್ಞೆ ಹೆಚ್ಚಾದಂತೆ ಜವಾಬ್ದಾರಿಯೂ ಹೆಚ್ಚುತ್ತದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಉತ್ತಮ ನಡವಳಿಕೆ ಮತ್ತು ಸನ್ನಡತೆಯನ್ನು ಜೀವನದ ಮೌಲ್ಯವನ್ನಾಗಿ ಸ್ವೀಕರಿಸಬೇಕೆಂದು ಕರೆ ನೀಡಿದರು.

ಹಿಂದಿನ ಕಾಲದಲ್ಲಿ ಗುರು-ಶಿಷ್ಯರ ಸಂಬಂಧ ಮೌಲ್ಯಾಧಾರಿತವಾಗಿತ್ತು. ಗುರುಗಳು ಕೇವಲ ಪಾಠ ಹೇಳುವವರಲ್ಲ, ಜೀವನದ ದಾರಿ ತೋರಿಸುವ ಮಾರ್ಗದರ್ಶಕರಾಗಿದ್ದರು. ಈಗ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಬಂಧದಲ್ಲಿ ಆ ಮೌಲ್ಯಗಳು ಕ್ಷೀಣಿಸುತ್ತಿರುವುದು ವಿಷಾದನೀಯ. ಪ್ರಾಪಂಚಿಕ ಶಿಕ್ಷಣದ ಜೊತೆಗೆ ಆಧ್ಯಾತ್ಮಿಕ ಶಿಕ್ಷಣವೂ ಅಗತ್ಯವೆಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

**ವಿದ್ಯಾರ್ಥಿಗಳೊಂದಿಗೆ ಸಂವಾದ**

ಕಾಲೇಜು ಮಕ್ಕಳೊಂದಿಗೆ ನಡೆದ ಸಂವಾದದಲ್ಲಿ ಸ್ವಾಮೀಜಿ ಪ್ರಶ್ನೆಗಳಿಗೆ ಉತ್ತರಿಸಿದರು. ದೇಶದ ಸಮಗ್ರ ಅಭಿವೃದ್ಧಿಗೆ ಸಮಾಜದ ಎಲ್ಲಾ ವರ್ಗದ ಜನರು ಮುಖ್ಯವಾಹಿನಿಗೆ ಬರಬೇಕು. ಸಮಾನತೆ ಸಾಧಿಸಲು ಮೀಸಲಾತಿ ವ್ಯವಸ್ಥೆ ಜಾರಿಯಾಗಿದೆ. ಸಮಾಜದಲ್ಲಿ ಹಿಂದುಳಿದ ಮಕ್ಕಳನ್ನು ಮೇಲಕ್ಕೆತ್ತಿ ಸಮಾನ ಅವಕಾಶ ಕಲ್ಪಿಸುವ ಉದ್ದೇಶದಿಂದ ಮೀಸಲಾತಿ ರೂಪುಗೊಂಡಿದೆ. ಅದರ ಮೂಲ ಆಶಯವನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳ ಬೇಕೆಂದರು.

ಶಿಕ್ಷಕ ಮತ್ತು ಗುರು ಎಂಬ ಪದಗಳ ಅರ್ಥದಲ್ಲಿ ವ್ಯತ್ಯಾಸವಿಲ್ಲ. ನಿಯಮ, ಶಿಸ್ತು ಮತ್ತು ಜೀವನದ ಮೌಲ್ಯಗಳನ್ನು ಬೋಧಿಸುವವರು ಶಿಕ್ಷಕರು. ಹಿಂದಿನ ಕಾಲದಲ್ಲಿ ಅವರನ್ನು ಗುರು ಎಂದು ಕರೆಯಲಾಗುತ್ತಿತ್ತು. ಇಂದಿನ ವಿದ್ಯಾರ್ಥಿಗಳು ತಮ್ಮೊಳಗಿನ ಆತ್ಮಶಕ್ತಿಯನ್ನು ಜಾಗೃತಗೊಳಿಸುವ ಶಿಕ್ಷಣ ಪಡೆಯಬೇಕೆಂದು ತಿಳಿ ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನ ಜ್ಞಾನಾರ್ಜನೆಯ ಫಲ. ಅದನ್ನು ತಪ್ಪು ಉದ್ದೇಶಗಳಿಗೆ ಬಳಸದೆ ಸಮಾಜದ ಒಳಿತಿಗಾಗಿ ಬಳಸಬೇಕು. ಹಗಲು ವಿಜ್ಞಾನ ಮತ್ತು ತಂತ್ರಜ್ಞಾನ ಅಧ್ಯಯನ ಮಾಡಿದರೆ, ಸಂಜೆ ಸಾಹಿತ್ಯ, ಸಂಸ್ಕೃತಿ ಮತ್ತು ಮಹನೀಯರ ಕೃತಿಗಳನ್ನು ಓದಬೇಕು. ಜ್ಞಾನ ಮತ್ತು ಮೌಲ್ಯಗಳ ನಡುವೆ ಸಮತೋಲನ ಕಾಪಾಡಿಕೊಂಡಾಗ ಮಾತ್ರ ಜೀವನ ಅರ್ಥಪೂರ್ಣವಾಗುತ್ತದೆಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಅವರು ಮಾತನಾಡಿ, ಅಜ್ಞಾನ ಎಂಬ ಕತ್ತಲೆಯನ್ನು ದೂರ ಮಾಡಿ ಆತ್ಮವಿಶ್ವಾಸ ತುಂಬುವವರು ಶಿಕ್ಷಕರು ಎಂದರು.

ಶಾಸಕ ಹೆಚ್.ಪಿ.ಸ್ವರೂಪ್, ನಗರಸಭೆ ಮಾಜಿ ಅಧ್ಯಕ್ಷ ಹಾಗು ಸಂಸ್ಥೆ ಕಾರ್ಯದರ್ಶಿ ಡಾ.ಹೆಚ್.ಎಸ್.ಅನಿಲ್ ಕುಮಾರ್, ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಸಂಸ್ಥೆಯ ಅಧ್ಯಕ್ಷೆ ಬಿ.ಲಲಿತಾ ಪ್ರಕಾಶ್, ಪ್ರಾಂಶುಪಾಲ ಜವರಾಜೇಗೌಡ, ಪುಷ್ಪ, ನವೀನ್, ನಯನ ಇತರರಿದ್ದರು.

## ಜಮೀನಿನಲ್ಲೇ ರೈತ ನೇಣಿಗೆ ಶರಣು

• ಪ್ರಜೋದಯ ವರದಿ



**ಹಾಸನ:** ಸಾಲಬಾಧೆಯಿಂದ ರೈತ ತಮ್ಮ ಜಮೀನಿನಲ್ಲಿದ್ದ ಮರಕ್ಕೆನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಸೋಮನಹಳ್ಳಿ ಕಾವಲಿನಲ್ಲಿ ನಡೆದಿದೆ. ಗ್ರಾಮದ ರಾಮೇಗೌಡ (42) ಆತ್ಮಹತ್ಯೆ ಮಾಡಿಕೊಂಡ ರೈತ.

ರಾಮೇಗೌಡ ಅವರು ಬ್ಯಾಂಕ್, ಹಣಕಾಸು ಸಂಸ್ಥೆಗಳು ಹಾಗು ಖಾಸಗಿ ಕೈಸಾಲ ಸೇರಿ ಒಟ್ಟು 16 ಲಕ್ಷರೂ. ಸಾಲ ಮಾಡಿಕೊಂಡಿದ್ದರು. ಬಿತ್ತನೆ ಮಾಡಿದ್ದ ಬೆಳೆ ಮಳೆ ಕೊರತೆಯಿಂದ ಸಂಪೂರ್ಣ ನಾಶವಾಗಿತ್ತು. ಮನೆ ನಿರ್ಮಾಣಕ್ಕಾಗಿ 4 ಲಕ್ಷ ರೂ. ಸಾಲವನ್ನೂ ಪಡೆದಿದ್ದರು. ಸಾಲದ ಮೊತ್ತವನ್ನು ತೀರಿಸಲು ಸಾಧ್ಯವಾಗದೆ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಅವರು, ಶುಕ್ರವಾರ ತಮ್ಮ ಜಮೀನಿನಲ್ಲಿದ್ದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾವೇರಿ ನೀರು ಹಂಚಿಕೆ : ವಾಸ್ತವ ಪರಿಶೀಲಿಸಲು ಆಗ್ರಹ

» ಮೊದಲನೇ ಪುಟದಿಂದ

**ರಾಜಕೀಯ ಪ್ರತಿಷ್ಠೆ ಸಲ್ಲದು**

ಕಾವೇರಿ ವಿವಾದವನ್ನು ತಮಿಳುನಾಡಿನ ರಾಜಕೀಯ ಪಕ್ಷಗಳು ತಮ್ಮ ಪ್ರತಿಷ್ಠೆಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿವೆ. ಕರ್ನಾಟಕ ಹಾಗೂ ತಮಿಳುನಾಡಿನ ಜಲಾಶಯಗಳಿಗೆ ಭೇಟಿ ನೀಡಿ, ನೆಲಮಟ್ಟದ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿದ ಬಳಿಕವೇ ತೀರ್ಮಾನ ಕೈಗೊಳ್ಳಬೇಕು. ಕಾವೇರಿ ನೀರು ಬಿಡುಗಡೆ ಆದೇಶದ ವಿರುದ್ಧ ಮೈಸೂರು, ಮಂಡ್ಯ ಸೇರಿ ವಿವಿಧ ಭಾಗಗಳಲ್ಲಿ ರೈತರು ಹಾಗು ಕನ್ನಡಪರ ಸಂಘಟನೆಗಳು ಪ್ರತಿಭಟನೆ ಆರಂಭಿಸಿರುವುದು ಸಹಜ. ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ಹೋರಾಟ ಅನಿವಾರ್ಯವಾಗಿದ್ದು, ಅದನ್ನು ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಆದರೆ, ಈ ವಿಚಾರವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವುದು ಸರಿಯಲ್ಲವೆಂದು ಹೇಳಿದರು.

ರಾಜ್ಯದಲ್ಲಿ ತೀವ್ರ ಬರಗಾಲ ಮತ್ತು ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವ ಸಂದರ್ಭದಲ್ಲೂ ಸರ್ಕಾರ ಸಮರ್ಪಕ ಕ್ರಮ ಕೈಗೊಳ್ಳುತ್ತಿಲ್ಲ. ಮುಖ್ಯಮಂತ್ರಿ ಕೇವಲ ಹೊಲದಲ್ಲಿ ನಿಂತು ಛಾಯಾಚಿತ್ರ ತೆಗೆಸಿಕೊಳ್ಳುವುದರಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ರಾಜ್ಯದಲ್ಲಿ ಪ್ರತಿದಿನ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದ್ದು, ಸರ್ಕಾರ ರೈತರ ಸಂಕಷ್ಟ ನಿವಾರಣೆಗೆ ಆದ್ಯತೆ ನೀಡಬೇಕೆಂದು ಆಗ್ರಹಿಸಿದರು.

**ಗ್ಯಾರಂಟಿ ಯೋಜನೆ ಮುಂದೂಡಿ:** ಸರ್ಕಾರ ಗ್ಯಾರಂಟಿ ಯೋಜನೆಗಳನ್ನು 2 ವರ್ಷ ಮುಂದೂಡಿ, ಆ ಹಣವನ್ನು ರೈತರ ನೆರವಿಗೆ ಬಳಸಬೇಕು. ಅದರಿಂದ ಸರ್ಕಾರವನ್ನು ಯಾರೂ ವಚನಭ್ರಷ್ಟ ಎಂದು ಕರೆಯುವುದಿಲ್ಲ. ಈಗ ಅಗತ್ಯವಿರುವುದು ರೈತರಿಗೆ ಆತ್ಮಸ್ಥೈರ್ಯ ತುಂಬುವುದು ಮತ್ತು ಬರಗಾಲ ಎದುರಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

## ಅತಿಥಿ ಉಪನ್ಯಾಸಕರ ನೇಮಕಕ್ಕೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ

» ಮೊದಲನೇ ಪುಟದಿಂದ


ಗ್ರಾಮೀಣ, ಪರಿಶಿಷ್ಟ ಜಾತಿ, ಪಂಗಡ ಹಾಗು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಖಾಸಗಿ ಕಾಲೇಜು ಅಥವಾ ಟ್ಯೂಷನ್‌ಗೆ ಹೋಗಲು ಆರ್ಥಿಕ ಸಾಮರ್ಥ್ಯ ಇರುವುದಿಲ್ಲ. ಸರ್ಕಾರದ ನಿರ್ಲಕ್ಷ್ಯದಿಂದ ಬಡವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆಂದರು.

ಆ.10ರೊಳಗೆ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಪಾರದರ್ಶಕವಾಗಿ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಬೇಕು. ಸೇವಾ ಭದ್ರತೆ, ಇಎಸ್‌ಐ, ಪಿಎಫ್ ಸೇರಿ ಎಲ್ಲಾ ಸೌಲಭ್ಯ ಕಲ್ಪಿಸಿ ಗೌರವಧನ ಹೆಚ್ಚಿಸಬೇಕು. ಆರು ತಿಂಗಳೊಳಗೆ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಕೆಪಿಎಸ್‌ಸಿ/ಸಂಬಂಧಿತ ಪ್ರಾಧಿಕಾರದ ಮೂಲಕ ಭರ್ತಿ ಮಾಡಬೇಕು. ದೂರದ ಊರುಗಳಿಂದ ಬರುವ ಬಡ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಸರ್ಕಾರಿ ಕಲಾ ಕಾಲೇಜಿನಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಪವನ್, ಜೀವನ್, ಆದಿತ್ಯ, ಮಮತಾ ಚೌಧ್ರಿ, ಸ್ಮಿತಾ ಸೇರಿ ಇತರರಿದ್ದರು.

## ಮತಗಟ್ಟೆ ಅಧಿಕಾರಿಗಳ ಸಭೆಗೆ ಏಜೆಂಟ್‌ಗಳು ಹಾಜರಾಗಿ

• ಪ್ರಜೋದಯ ವರದಿ




**ಹಾಸನ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಶೇ.100 ರಷ್ಟು ಪೂರ್ಣ ಗೊಂಡಿರುವ ಮತಗಟ್ಟೆ ಅಧಿಕಾರಿಗಳು ಸಭೆ ನಡೆಸಿ ಮತಗಟ್ಟೆ ಏಜೆಂಟ್‌ರಿಂದ ಸಹಿ ಪಡೆದು ಆಪ್‌ನಲ್ಲಿ ಅಪ್ಲೋಡ್ ಮಾಡಬೇಕು. ಈ ನಿಟ್ಟಿನಲ್ಲಿ ಸಭೆಗೆ ಖುದ್ದು ಹಾಜರಾಗುವಂತೆ ಮತಗಟ್ಟೆ ಏಜೆಂಟ್‌ಗಳಿಗೆ ನಿರ್ದೇಶನ ನೀಡುವಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯದ ಪ್ರಗತಿಯ ಮಾಹಿತಿ ನೀಡುವ ಕುರಿತು ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಇದುವರೆಗೆ ಶೇ.99 ರಷ್ಟು ಎನ್ಯುಮರೇಷನ್ ನಮೂನೆಗಳನ್ನು ಹಿಂದಿರುಗಿಸಲಾಗಿದೆ. ಉಳಿದ ಶೇ.1ರಷ್ಟು ಅಂದರೆ 16,000 ಎನ್ಯುಮರೇಷನ್ ನಮೂನೆಗಳನ್ನು ಇಂದೇ ಹಿಂದಿರುಗಿಸುವಂತೆ ತಿಳಿಸುವುದರ ಮೂಲಕ ಆರೋಗ್ಯಕರ ಮತದಾರರ ಪಟ್ಟಿ ತಯಾರಿಸಲು ಸಹಕಾರ ನೀಡುವಂತೆ ತಿಳಿಸಿದರು.

ಕರಡು ಮತದಾರರ ಪಟ್ಟಿ ಆ.17 ರಂದು ಪ್ರಕಟಿಸಲಾಗುತ್ತದೆ, ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಆ.17 ರಿಂದ ಸೆ.16 ರವರೆಗೆ ಅವಕಾಶ ಇರುತ್ತದೆ. ಅ.19 ರಂದು ಅಂತಿಮ ಮತ ದಾರರ ಪಟ್ಟಿ ಪ್ರಕಟ ಆಗುತ್ತದೆ. ಆಕಸ್ಮಾತ್ತಾಗಿ ಅರ್ಹ ಮತದಾರರ ಹೆಸರು ಪಟ್ಟಿಯಲ್ಲಿ ಕೈ ತಪ್ಪಿ ಹೋಗಿದ್ದರೆ ಭಯಪಡುವ ಅಗತ್ಯವಿಲ್ಲ ಹೊಸದಾಗಿ ನಮೂನೆ 6ರ ಜೊತೆಗೆ 11 ದಾಖಲೆಗಳಲ್ಲಿ ಯಾವುದಾದರೊಂದು ದಾಖಲೆ ಲಗತ್ತಿಸಿ ಅರ್ಜಿ ಸಲ್ಲಿಸಬಹುದೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಉಪ ವಿಭಾಗಾಧಿಕಾರಿಗಳಾದ ಜಗದೀಶ್ ಗಂಗಣ್ಣ ನವರ್, ಹುಲ್ಲುಮನಿ ತಿಮ್ಮಣ್ಣ ಮತ್ತು ವಿವಿಧ ಅಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು.

## ಇಂದು ಕಾಂಗ್ರೆಸ್ ಕಾರ್ಮಿಕ ಘಟಕದ ರಾಜ್ಯ ಮಟ್ಟದ ಸಭೆ

• ಪ್ರಜೋದಯ ವರದಿ



**ಹಾಸನ:** ಕಾಂಗ್ರೆಸ್ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯಕಾರಿಣಿಯ 29ನೇ ರಾಜ್ಯ ಮಟ್ಟದ ಸಭೆ ಆ.1ರ ಬೆಳಿಗ್ಗೆ 11 ಗಂಟೆಗೆ ನಗರದ ಬೇಲೂರು ರಸ್ತೆಯಲ್ಲಿರುವ ಪರಿಣಿತಿ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿದೆ ಎಂದು ಕಾಂಗ್ರೆಸ್ ಕಾರ್ಮಿಕ ಘಟಕದ ಜಿಲ್ಲಾಧ್ಯಕ್ಷ ಹೇಮಂತ್ ಕುಮಾರ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಪುಟ್ಟಸ್ವಾಮಿಗೌಡ ಹಾಗು ಪದಾಧಿಕಾರಿಗಳು ಭಾಗವಹಿಸಲಿ ದ್ದಾರೆ. ರಾಜ್ಯ ಮಟ್ಟದ ಸಭೆಯಲ್ಲಿ ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗು ಗ್ರಾಮ ಪಂಚಾಯಿತಿ ಚುನಾವಣೆಗಳಿಗೆ ಸಂಬಂಧಿಸಿದ ಕಾರ್ಯತಂತ್ರಗಳ ಕುರಿತು ಚರ್ಚೆ ನಡೆಯಲಿದೆ ಎಂದು ಹೇಳಿದರು.

ಈ ವೇಳೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಚುನಾವಣೆಗೆ ಸಂಬಂಧಿಸಿದ ವಿಷಯ ಗಳು ಹಾಗು ಕಾರ್ಮಿಕ ಇಲಾಖೆಯ ವಿವಿಧ ಕಲ್ಯಾಣ ಯೋಜನೆ, ಸೌಲಭ್ಯ ಮತ್ತು ಅವುಗಳನ್ನು ಕಾರ್ಮಿಕರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಕುರಿತು ಸಮಗ್ರ ಚರ್ಚೆ ನಡೆಸಲಾಗುವುದು ಎಂದು ತಿಳಿಸಿದರು.

ಜಿಲ್ಲೆಯ ಕಾಂಗ್ರೆಸ್ ಕಾರ್ಮಿಕ ಘಟಕದ ಎಲ್ಲಾ ಪದಾಧಿಕಾರಿಗಳು, ಕಾರ್ಯಕರ್ತರು ಹಾಗು ಸದಸ್ಯರು ಸಭೆಯಲ್ಲಿ ಕಡ್ಡಾಯವಾಗಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದರು. ಸುದ್ದಿಗೋಷ್ಠಿಯಲ್ಲಿ ರವಿಚಂದ್ರ, ಪ್ರದೀಪ್, ಲೋಕೇಶ್ ಮತ್ತಿತರರಿದ್ದರು.

## ಪತ್ರಕರ್ತರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಿನ ಭರವಸೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಒತ್ತಡದ ಮಧ್ಯೆ ಕರ್ತವ್ಯ ನಿರ್ವಹಿಸುವ ಪತ್ರಕರ್ತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಿಎಸ್‌ಆರ್ ಫಂಡ್ ಅಡಿ ನೆರವು ನೀಡಲಾಗುವುದೆಂದು ಉದ್ಯಮಿ ದಿಂಡಗೂರು ಆನಂದ್‌ಗೌಡ ಅವರು ಹೇಳಿದರು.

ಪಟ್ಟಣ ಹೊರವಲಯದಲ್ಲಿರುವ ಬೆಲಸಿಂದ ಶ್ರೀವನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯಲ್ಲಿ ಚಿತ್ರಕಲಾವಿದ ಬಿ.ಎಸ್.ದೇಸಾಯಿ ಅವರು ಸ್ಥಳದಲ್ಲಿಯೇ ರಚಿಸಿದ ಪ್ರಕೃತಿ ಕಲಾಕೃತಿಯನ್ನು ಅನಾವರಣಗೊಳಿಸಿ ಮಾತನಾಡಿದ ಅವರು, ಪತ್ರಕರ್ತರ ಸೇವೆ ಅನನ್ಯವಾದುದು. ಸೈನಿಕರಂತೆ ಪ್ರತಿನಿತ್ಯ ಕರ್ತವ್ಯ ನಿರ್ವಹಿಸುತ್ತಾರೆ. ಅವರ ಕುಟುಂಬದ ಮಕ್ಕಳು ಉತ್ತಮ ವಿದ್ಯಾಭ್ಯಾಸ ಪಡೆಯಬೇಕು. ಪತ್ರಕರ್ತರ ಮಕ್ಕಳ ವಿದ್ಯಾಭ್ಯಾಸಕ್ಕೆ ತಮ್ಮ ಒಡೆತನದ ಕಂಪನಿಯಿಂದ ಸಿಎಸ್‌ಆರ್ ಫಂಡ್ ಅಡಿ ಅಗತ್ಯ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಲೋಕೇಶ್, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ ಶೆಟ್ಟಿಹಳ್ಳಿ, ಪ್ರಧಾನ ಕಾರ್ಯದರ್ಶಿ ಆರ್. ಶ್ರೀನಿವಾಸ್ ಉಳ್ಳಾವಳ್ಳಿ, ಉಪಾಧ್ಯಕ್ಷರಾದ ಪುಟ್ಟರಾಜು, ನಂದನ್ ಪುಟ್ಟಣ್ಣ, ಸಹ ಕಾರ್ಯದರ್ಶಿ ಗಳಾದ ನಾಗೇಂದ್ರರಾಯ, ಜಯಕುಮಾರ್, ಖಜಾಂಚಿ ಎ.ಎಲ್. ನಾಗೇಶ್, ಜಿಲ್ಲಾ ಕಾರ್ಯ ಕಾರಣಿ ಸದಸ್ಯ ಬಿ.ಸಿ.ಚನ್ನೇಗೌಡ, ನಿಕಟಪೂರ್ವ ಅಧ್ಯಕ್ಷ ಸಿದ್ದರಾಜು, ಮಾಜಿ ಅಧ್ಯಕ್ಷ ಪುಟ್ಟಣ್ಣ, ಚಿತ್ರ ಕಲಾವಿದ ಬಿ.ಎಸ್.ದೇಸಾಯಿ ಇತರರು ಹಾಜರಿದ್ದರು.

## ಲೋಕ ಸ್ಮರಿಸುವುದು ಜ್ಞಾನಿಗಳನ್ನೇ ಹೊರತು ಬಿಲೇನಿಯರ್‌ಗಳನ್ನಲ್ಲ

» ಮೊದಲನೇ ಪುಟದಿಂದ

**ಕಲಿಕೆಯ ಹಸಿವಿದ್ದರೆ ಗುರು ಸಿಗುತ್ತಾರೆ:** ಖ್ಯಾತ ವಾಗ್ಮಿ ಪ್ರೊ. ಕೃಷ್ಣೇಗೌಡ ಅವರು ಮಾತನಾಡಿ, ಎಲ್ಲದಕ್ಕೂ ನಾನೇ ಕಾರಣ, ನನ್ನಿಂ ದಲೇ ಎಲ್ಲಾ ಎಂಬ ಭ್ರಮೆಯಿಂದ ಹೊರಬರದ ಹೊರತು ಗುರುವಿನ ಆಶೀರ್ವಾದ ಸಿಗಲು ಸಾಧ್ಯವಿಲ್ಲ. ನಾನು ಜೀವನದಲ್ಲಿ ಏನನ್ನಾದರೂ ಕಲಿಯಬೇಕೆಂಬ ಹಸಿವಿದ್ದವರಿಗೆ ಒಳ್ಳೆಯ ಗುರು ಸಿಕ್ಕೇ ಸಿಗುತ್ತಾರೆ. ಪ್ರತಿಷ್ಠೆ, ಮನ್ನಣೆ, ಗೌರವ, ಆಸ್ತಿ-ಅಂತಸ್ತು ಇದೆಲ್ಲದರ ಅಹಂ ಅನ್ನು ಬಾಗಿಲಲ್ಲೇ ಬಿಟ್ಟು ಗುರುಗಳನ್ನು ಕಾಣಬೇಕೆಂದರು.

ಗುರು ಎನ್ನುವುದು ಒಂದು ತತ್ವ. ಯಾವುದೋ ಒಂದು ರೂಪ ಈ ಜಗತ್ತನ್ನೆಲ್ಲಾ ವ್ಯಾಪಿಸಿದೆ. ಗುರುವಿನ ಕಾರಣ್ಯ ಎನ್ನುವುದು ಎಲ್ಲದರಲ್ಲೂ ಅಣು ಅಣುವಿನಲ್ಲೂ ವ್ಯಾಪಿಸಿದೆ. ಅಶರೀರವಾಗಿ ವ್ಯಾಪಿಸಿರುವುದೇ ಗುರುವಿನ ಶಕ್ತಿ. ಗುರುತ್ವ ಎನ್ನುವುದಕ್ಕೆ ಶರೀರ ಇರುವುದಿಲ್ಲವೆಂದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಭಕ್ತರು ಗುರು ವಂದನೆ ಸಲ್ಲಿಸಿದರು. ಇದೇ ವೇಳೆ ಮೆಲುಕೋಟೆ ವೈ.ಎನ್.ಗೌಡ ಅವರು ಸಂಪಾದಿಸಿರುವ ಶ್ರೀ ಗುರೂಜಿ ಹೇಳಿದ ಕಥೆಗಳು ಎಂಬ ಕೃತಿ ಬಿಡು ಗಡೆ ಮಾಡಲಾಯಿತು. ಬಿಜಿಎಸ್ ಶಾಲಾ ವಿದ್ಯಾರ್ಥಿಗಳು ಅರ್ಥಪೂರ್ಣ ವಾಗಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಶ್ರೀ ಶಂಭುನಾಥ ಸ್ವಾಮೀಜಿ ಪ್ರಾಸ್ತವಿಕವಾಗಿ ಮಾತನಾಡಿದರು.

ವಿವಿಧ ಮಠಾಧೀಶರಾದ ಶ್ರೀ ರಾಮಚಂದ್ರ ಶಾಸ್ತ್ರಿ, ಶ್ರೀ ಸಂಗ ಮೇಶ್ವರ ಸ್ವಾಮೀಜಿ, ಶ್ರೀ ವಿಜಯ ಕುಮಾರ ಸ್ವಾಮೀಜಿ, ನಂದೀಶ್ವರ ಸ್ವಾಮೀಜಿ, ಶ್ರೀ ಕಲ್ಯಾಣ ಸ್ವಾಮೀಜಿ, ಸಾಯಿ ಕೀರ್ತಿ ನಾಥ ಸ್ವಾಮೀಜಿ, ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ, ಅರ ಸೀಕೆರೆ ಒಕ್ಕಲಿಗರ ಸಂಘದ ತಾಲ್ಲೂಕು ಅಧ್ಯಕ್ಷ ಅನಂತ್‌ಕುಮಾರ್, ಹೆಚ್.ಎಸ್.ವಿಜಯ ಕುಮಾರ್, ರಾಜೇಶ್ವರಿ, ಹುಣ್ಣಿಮೆ ಕಾರ್ಯಕ್ರಮ ಸಂಚಾಲಕ ಹೆಚ್.ಬಿ.ಮದನಗೌಡ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ಶ್ರೀಮಠದ ವ್ಯವಸ್ಥಾಪಕ ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

## ಕಾಡಾನೆ ದಾಳಿಗೆ ರೈತ ಬಲಿ

» ಮೊದಲನೇ ಪುಟದಿಂದ

ಶವ ಪತ್ತೆಯಾದ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದರು. ಈ ಭಾಗದಲ್ಲಿ ಕಾಡಾನೆಗಳ ಹಾವಳಿ ಹೆಚ್ಚುತ್ತಿದ್ದು, ರೈತರು ಜೀವಭಯದಲ್ಲಿ ಕೃಷಿ ಚಟುವಟಿಕೆ ನಡೆಸುವಂತಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

**ಗ್ರಾಮಸ್ಥರ ಪ್ರತಿಭಟನೆ**

ಕಾಡಾನೆ ದಾಳಿಯಿಂದ ರೈತರ ಸಾವುಗಳು ಸಂಭವಿಸುತ್ತಿದ್ದರೂ ಸರ್ಕಾರ ಹಾಗು ಅರಣ್ಯ ಇಲಾಖೆ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲವಾಗಿವೆ. ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ಕುರಿತು ಸ್ಪಷ್ಟ ಭರವಸೆ ನೀಡುವವರೆಗೆ ಶವವನ್ನು ಸ್ಥಳಾಂತರಿಸುವುದಿಲ್ಲವೆಂದು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಪರಿಣಾಮ ಕೆಲಕಾಲ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು.

ಕಾಡಾನೆಗಳು ಕಾಫಿ ತೋಟ, ಕೃಷಿ ಜಮೀನು ಹಾಗು ಗ್ರಾಮಗಳ ಅಂಚಿನವರೆಗೆ ನಿರ್ಭಯವಾಗಿ ಸಂಚರಿಸುತ್ತಿವೆ. ರೈತರು ಬೆಳಿಗ್ಗೆ ಅಥವಾ ಸಂಜೆ ತೋಟಗಳಿಗೆ ತೆರಳುವುದಕ್ಕೂ ಭಯಪಡುವ ಸ್ಥಿತಿ ನಿರ್ಮಾಣವಾಗಿದೆ. ಬೆಳೆ ನಷ್ಟದ ಜೊತೆಗೆ ಮಾನವ ಜೀವಗಳೂ ಬಲಿಯಾಗುತ್ತಿವೆ. ಸರಣಿ ಘಟನೆಗಳಾದರೂ ಸರ್ಕಾರ ಎಚ್ಚೆತ್ತುಕೊಳ್ಳುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಡಾನೆಗಳನ್ನು ಕೇವಲ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಓಡಿಸುವ ಬದಲು, ಜನವಸತಿ ಪ್ರದೇಶಗಳಿಂದ ದೂರವಿರುವ ಸುರಕ್ಷಿತ ಅರಣ್ಯ ಪ್ರದೇಶಗಳಿಗೆ ಶಾಶ್ವತವಾಗಿ ಸ್ಥಳಾಂತರಿಸಬೇಕು. ಕಾಡಾನೆ ಹಾವಳಿ ನಿಯಂತ್ರಣಕ್ಕೆ ವೈಜ್ಞಾನಿಕ ಮತ್ತು ಪರಿಣಾಮಕಾರಿ ಯೋಜನೆ ಜಾರಿಗೊಳಿಸಬೇಕು. ಮೃತ ರೈತನ ಕುಟುಂಬಕ್ಕೆ ಸೂಕ್ತ ಪರಿಹಾರ ಹಾಗು ಕುಟುಂಬದ ಸದಸ್ಯರಿಗೆ ಅಗತ್ಯ ನೆರವು ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಸ್ಥಳಕ್ಕೆ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಅರೇಹಳ್ಳಿ ಪಿಎಸ್‌ಐ ಶೋಭ ಭರಮಣ್ಣನವರ್, ಅರಣ್ಯಾಧಿಕಾರಿ ಯತೀಶ್, ಕಾಫಿ ಬೆಳೆಗಾರರ ಸಂಘದ ಶಾರೀಬ್, ಗ್ರಾಮಸ್ಥರಾದ ಮಂಜು ಕಿತ್ತಾವರ, ನಂದೀಶ್, ಕೆ.ಜಿ.ಕುಮಾರ್, ರೈತ ಸಂಘದ ಮುಖಂಡರು ಹಾಗು ಗ್ರಾಮಸ್ಥರು ಇದ್ದರು.

## ವಿಧಾನ ಪರಿಷತ್: ಗಾಯತ್ರಿ ಶಾಂತೇಗೌಡ ಗೆಲುವು

• ಪ್ರಜೋದಯ ವರದಿ



**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಗೆ ಸಂಬಂಧಿಸಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಗಳಲ್ಲಿ ನಡೆದ ಸುದೀರ್ಘ ಕಾನೂನು ಹೋರಾಟದ ನಂತರ ಕಾಂಗ್ರೆಸ್ ಅಭ್ಯರ್ಥಿ ಗಾಯತ್ರಿ ಶಾಂತೇಗೌಡ ಅವರು ಬಿಜೆಪಿ ಅಭ್ಯರ್ಥಿ ಎಂ.ಕೆ.ಪ್ರಾಣೇಶ್ ವಿರುದ್ಧ 9 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಗಾಯತ್ರಿ ಶಾಂತೇಗೌಡ ಅವರು, ಸತ್ಯಕ್ಕೆ ಯಾವತ್ತಿದ್ದರೂ ಜಯ ಸಿಗುತ್ತದೆ ಎಂಬುದು ಸಾಬೀತಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ನಾನು ಪ್ರಾಣೇಶ್ ಅವರ ವಿರುದ್ಧ ಕೇವಲ 6 ಮತಗಳಿಂದ ಸೋತಿದ್ದೆ. ಅದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದೆ. ವಿಚಾರಣೆ ಮತ್ತು ಮರು ಎಣಿಕೆಯ ಫಲಿತಾಂಶ ಈಗ ಮುಚ್ಚಿದ ಲಕೋಟೆಯಲ್ಲಿ ಪ್ರಕಟವಾಗಿದ್ದು, 9 ಮತಗಳಿಂದ ಗೆಲುವು ಸಾಧಿಸಿದ್ದೇನೆಂದು ತೀರ್ಪು ಪ್ರಕಟವಾಗಿದೆ ಎಂದರು.

ಸ್ಥಳೀಯ ಸಂಸ್ಥೆಗಳಿಗೆ ನಾಮನಿರ್ದೇಶನಗೊಂಡ ಸದಸ್ಯರು ಪರಿಷತ್ ಚುನಾವಣೆಯಲ್ಲಿ ಮತದಾನ ಮಾಡುವಂತಿಲ್ಲ ಎಂದು ನ್ಯಾಯಾಲಯ ಸ್ಪಷ್ಟ ತೀರ್ಪು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಪ್ರಾಣೇಶ್ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸುಪ್ರೀಂ ಕೋರ್ಟ್ ಅವರ ಅರ್ಜಿಯನ್ನು ವಜಾಗೊಳಿಸಿತು. ಅಂತಿಮವಾಗಿ ನ್ಯಾಯ ಸಿಕ್ಕಿದೆ ಎಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK